ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

**ಒಟ್ಟು ಪ್ರಶ್ನೆಗಳು – ೯೬**

**ಪಟ್ಟಿ – ೦೯**

# ಕರ್ನಾಟಕ ವಿಧಾನ ಪರಿಷತ್ತು

ನೂರ ಇಪ್ಪತ್ತೈದನೇ ಅಧಿವೇಶನ

**ಗುರುವಾರ, ದಿನಾಂಕ : ೦೩ನೇ ಜುಲೈ, ೨೦೧೪**

---

## ಸಮೂಹ – IV

೧. ಮುಖ್ಯಮಂತ್ರಿಗಳು

೨. ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು

೩. ಗೃಹ ಸಚಿವರು

೪. ನಗರಾಭಿವೃದ್ಧಿ ಸಚಿವರು

---

## ಮಾನವ ಹಕ್ಕು ಆಯೋಗದ ಅಧ್ಯಕ್ಷರ ನೇಮಕಾತಿ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೪೨೬ (೫೫೯) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಖಾಲಿ ಇರುವ ಮಾನವ ಹಕ್ಕು ಆಯೋಗದ ಅಧ್ಯಕ್ಷರ ಹುದ್ದೆಯನ್ನು ಯಾವಾಗ ನೇಮಕಮಾಡಲಾಗುವುದು ;

(ಆ) ಮಾನವ ಹಕ್ಕು ಆಯೋಗದ ಅಧ್ಯಕ್ಷರ ಆಯ್ಕೆಗೆ ಸರ್ಕಾರ ವಿಳಂಬ ಮಾಡುತ್ತಿರುವುದೇಕೆ (ವಿವರ ನೀಡುವುದು) ?

## ನೌಕರರ ವರ್ಗಾವಣೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೪೨೭(೬.೭೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹಲವಾರು ವರ್ಷಗಳಿಂದ ವಿಧಾನಸೌಧ/ವಿಕಾಸಸೌಧ ಮತ್ತು ಬಹುಮಹಡಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು/ನೌಕರರು ವರ್ಗಾವಣೆ ಇಲ್ಲದೆ ಆಯಕಟ್ಟಿನ ಜಾಗದಲ್ಲಿ ಕುಳಿತು ಆಡಳಿತಯಂತ್ರ ನಿಷ್ಕ್ರಿಯಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗೆ ವರ್ಗಾವಣೆ ಮಾಡದಿರಲು ಇರುವಂತಹ ವಿಶೇಷ ನಿಯಮಗಳೇನು ; ಹಾಗೂ ಅದರ ಅಗತ್ಯವೇನು ;

(ಇ) ಪ್ರಸ್ತುತ ಪರಿಸ್ಥಿತಿಯಲ್ಲಿ ಸದರಿ ನಿಯಮವನ್ನು ಪರಿಶೀಲಿಸಿ, ನಿಯಮ ಬದಲಾವಣೆ ಮಾಡಿ ಅಧಿಕಾರಿ / ನೌಕರರನ್ನು ವರ್ಗಾಯಿಸುವುದರಿಂದ ಆಡಳಿತಕ್ಕೆ ಚುರುಕು ಮುಟ್ಟಿಸುವಂತಾಗುವುದಿಲ್ಲವೆ ;

(ಈ) ಕೆಲವು ನಿಷ್ಕ್ರಿಯ ಅಧಿಕಾರಿಗಳ ಒತ್ತಡಕ್ಕೆ ಮಣಿದು ಸರ್ಕಾರ ಈ ನಿಯಮ ಪಾಲಿಸುತ್ತಿದೆ ಎನ್ನುವುದು ನಿಜವೇ ; ಸದರಿ ಸಮಸ್ಯೆಗೆ ಸರ್ಕಾರದಿಂದ ಪರಿಹಾರವೇನು ?

## ಅಕ್ರಮ ನೀರಿನ ಸಂಪರ್ಕದ ಸಕ್ರಮ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೪೨೮ (೫೬.೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರದಲ್ಲಿ ೮೦,೦೦೦ ಕ್ಕೂ ಹೆಚ್ಚು ಅಕ್ರಮ ನೀರಿನ ನಲ್ಲಿಗಳಿರುವುದು ನಿಜವೇ ;

(ಆ) ನಿಜವಿದ್ದಲ್ಲಿ, ಮೂಲಭೂತ ಸೌಕರ್ಯಗಳಲ್ಲೊಂದಾದ ನೀರಿನ ನಲ್ಲಿ ಅನಿವಾರ್ಯವಾದರೆ ಸಕ್ರಮಗೊಳಿಸಿ ತೆರಿಗೆ ವಿಧಿಸಲು ಅಧಿಕಾರಿಗಳ ಇಚ್ಛಾಶಕ್ತಿ ಕೊರತೆ ಎಂದು ಸರ್ಕಾರದ ಗಮನಕ್ಕೆ ಬಂದಿರುವುದೇ ;

(ಇ) ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ ?

## ಪಶು ಆಸ್ಪತ್ರೆಗಳ ಮೇಲ್ದರ್ಜೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೪೨೯ (೬೭೦) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಪಶು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಆ) ಪ್ರತಿ ಪಶು ಆಸ್ಪತ್ರೆಯ ಕೃತಕ ಗರ್ಭಧಾರಣ ಘಟಕದಲ್ಲಿ ಶೀತಲಯಂತ್ರದ ಲೋಪದೋಷದಿಂದಾಗಿ ಶೇಖರಿಸಿರುವ ವೀರ್ಯಾಣು ಶಕ್ತಿಹೀನವಾಗಿ ಕೃತಕ ಗರ್ಭಧಾರಣ ವ್ಯವಸ್ಥೆ ವಿಫಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ಸಮಸ್ಯೆಯನ್ನು ಕಟ್ಟುನಿಟ್ಟಾಗಿ ಬಗೆಹರಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಸರ್ಕಾರಿ ನೌಕರರ ಸಂಘದ ನಿಯಮಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೪೩೦ (೬೭೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯ ಸರ್ಕಾರಿ ನೌಕರರ ಸಂಘದಲ್ಲಿ ಪದಾಧಿಕಾರಿಗಳಾಗಲು ಅಧಿಕಾರಿ/ನೌಕರರಿಗೆ ಇರುವ ಅರ್ಹತೆಗಳೇನು ; ಎನ್.ಜಿ.ಓ. ಇದರ ವಿಸ್ತೃತ ಅರ್ಥವೇನು ;

(ಆ) ವೈದ್ಯಾಧಿಕಾರಿಗಳು ಈ ಸಂಘದಲ್ಲಿ ಪದಾಧಿಕಾರಿಗಳಾಗಲು ಅರ್ಹರೆ ; ಹಾಗೂ ಪದಾಧಿಕಾರಿಗಳು ರಾಜ್ಯ ಸರ್ಕಾರಿ ನೌಕರರ ಸಂಘದ ನಿಯಮದಂತೆ ಕೇಂದ್ರಸ್ಥಾನದಲ್ಲಿರುವ/ಒಂದೇ ಜಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಾ ಎಷ್ಟು ವರ್ಷಗಳಿರಬಹುದು ;

(ಇ) ಒಂದೇ ಸ್ಥಳದಲ್ಲಿ ಸುಮಾರು ೧೪ ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು/ನೌಕರರುಗಳಿಗೆ ವರ್ಗಾವಣೆಯ ನಿಯಮಗಳು ಅನ್ವಯಿಸುವುದಿಲ್ಲವೆ (ಸಂಪೂರ್ಣ ವಿವರ ಒದಗಿಸುವುದು) ?

## ಬೆಂಗಳೂರು ಹಾಲು ಒಕ್ಕೂಟ

**ಶ್ರೀಮತಿ ತಾರಾಅನೂರಾಧ (ನಾಮ ನಿರ್ದೇಶನ ಹೊಂದಿದವರು) :-**

೪೩೧ (೫೬೧) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸರ್ಕಾರದ ಇಲಾಖೆಗಳು ಮತ್ತು ರಾಜ್ಯ ಸರ್ಕಾರಿ ಸೌಮ್ಯದ ಸಂಸ್ಥೆಗಳು ತಮ್ಮ ತಮ್ಮ ವೃಂದ ನೇಮಕಾತಿ ನಿಯಮಾವಳಿಗಳಲ್ಲಿ, ಮುಂಬಡ್ತಿಯಲ್ಲಿ ೫ ವರ್ಷಗಳ ಸೇವಾವಧಿ (Qualifying Service) ಪೂರೈಸಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, ೩ ವರ್ಷಗಳ ಅವಧಿ ಪೂರೈಕೆ ಮಾಡಿರುವ ಅಭ್ಯರ್ಥಿಗಳನ್ನು ಪರಿಗಣಿಸಲು ಅವಕಾಶಗಳನ್ನು ಕಲ್ಪಿಸಿಕೊಡಬೇಕೆಂದು ಸರ್ಕಾರ ದಶಕಗಳ ಹಿಂದೆಯೇ ಆದೇಶಗಳ ಮೂಲಕ ನೀಡಿರುವ ಸೂಚನೆಗಳನ್ನು ಬೆಂಗಳೂರು ಹಾಲು ಉತ್ಪಾದಕರ ಒಕ್ಕೂಟ ಅಳವಡಿಸಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಬ್ಯಾಕ್ ಲಾಗ್ ಹುದ್ದೆಗಳ ಭರ್ತಿ ಆದೇಶಗಳನ್ನು ಈ ಒಕ್ಕೂಟ ಪಾಲನೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ ಸಕಾರಣಗಳೇನು ;

(ಈ) ಸರ್ಕಾರದ ಮೇಲಿನ ಆದೇಶ/ಸೂಚನೆಗಳನ್ನು ಪಾಲನೆ ಮಾಡಲು ಒಕ್ಕೂಟಕ್ಕೆ ಸರ್ಕಾರ ಸೂಚಿಸುವುದೇ ?

## ಅಕ್ರಮ ಮರಳು ಸಂಗ್ರಹಣೆಯ ಮುಟ್ಟುಗೋಲು

**ಶ್ರೀ ಜೆ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೪೩೨ (೫೬೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟ ಜಿಲ್ಲೆಯ ಕೃಷ್ಣಾ, ಘಟಪ್ರಭಾ, ಮಲಪ್ರಭಾ ನದಿಗಳಿಂದ ಅಕ್ರಮವಾಗಿ ಸಂಗ್ರಹಿಸಿದ ಇಷ್ಟು ಮರಳನ್ನು ಮುಟ್ಟುಗೋಲು ಹಾಕಲಾಗಿದೆ (ವಿವರವನ್ನು ತಾಲ್ಲೂಕುವಾರು ನೀಡುವುದು) ;

(ಆ) ಮುಟ್ಟುಗೋಲು ಹಾಕಿಕೊಂಡ ಮರಳಿನ ಹರಾಜಿನಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು (ತಾಲ್ಲೂಕುವಾರು ವಿವರಣೆ ನೀಡುವುದು) ;

(ಇ) ಮುಟ್ಟುಗೋಲು ಹಾಕಿಕೊಂಡ ಮರಳು ಸಹ ಪುನಃ ಅಕ್ರಮವಾಗಿ ಸಾಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ ಅಂತಹವರ ವಿರುದ್ಧ ಏನು ಕ್ರಮ ಜರುಗಿಸಲಾಗಿದೆ ?

## ಬೃಹತ್ ಕೈಗಾರಿಕೆಗಳು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೪೩೩ (೬೬೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿ ಸಧ್ಯ ಕಾರ್ಯಸ್ಥಿತಿಯಲ್ಲಿರುವ ಬೃಹತ್ ಕೈಗಾರಿಕೆಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಸದರಿ ಕಾರ್ಖಾನೆಗಳು ಸರ್ಕಾರದಿಂದ ಪಡೆದುಕೊಂಡಿರುವ ಭೂಮಿ ಎಷ್ಟು ;

(ಇ) ಪ್ರತಿ ಕಾರ್ಖಾನೆಗಳಿಗೆ ನೀಡಲಾದ ಭೂ ವಿಸ್ತೀರ್ಣವನ್ನು ಕಾರ್ಖಾನೆಗಳು ಸಮರ್ಪಕವಾಗಿ ಬಳಸಿಕೊಂಡಿದೆಯೇ ; ಇಲ್ಲವಾದಲ್ಲಿ, ಬಳಸಿಕೊಳ್ಳದೇ ಇರುವ ಭೂ ವಿಸ್ತೀರ್ಣದ ವಿವರ ನೀಡುವುದು (ಕಟ್ಟಡದ ನಿರ್ಮಾಣ, ರಸ್ತೆ, ಇತ್ಯಾದಿ) ;

(ಈ) ಉಪಯೋಗಿಸಿಕೊಳ್ಳದ ಭೂ ಪ್ರದೇಶವನ್ನು ಸರ್ಕಾರ ಮರಳಿ ತನ್ನ ವಶಕ್ಕೆ ಪಡೆದುಕೊಳ್ಳುವತ್ತ ಚಿಂತನೆ ಏನಾದರೂ ನಡೆಸಿದೆಯೇ ;

(ಉ) ಇಲ್ಲವಾದಲ್ಲಿ, ಅನಗತ್ಯವಾಗಿ ಸಾವಿರಾರು ಎಕರೆ ಕೃಷಿ ಭೂಮಿಯ ಅನುತ್ಪಾದನೆ ತಪ್ಪಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು ?

## ಕೊಳವೆ ಬಾವಿ ನೀರು ಸರಬರಾಜು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೪೩೪ (೫೬೪) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಯಲಬುರ್ಗಾ ಪಟ್ಟಣದ ಕೊಳವೆ ನೀರು ಸರಬರಾಜು ಯೋಜನೆ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡದ್ದು ಯಾವಾಗ ;

(ಆ) ಸದರಿ ಕಾಮಗಾರಿಗೆಂದು ಪ್ರಸಕ್ತ ಸಾಲಿನವರೆಗೂ ಬಿಡುಗಡೆಯಾದ ಅನುದಾನ ಎಷ್ಟು ;

(ಇ) ಈ ಕಾಮಗಾರಿಯನ್ನು ಯಾವ ಗುತ್ತಿಗೆದಾರರು ನಿರ್ವಹಿಸುತ್ತಿದ್ದಾರೆ ; ಗುತ್ತಿಗೆ ಕರಾರಿನನ್ವಯ ಕಾಮಗಾರಿಯನ್ನು ಯಾವ ದಿನಾಂಕಕ್ಕೆ ಮುಕ್ತಾಯಗೊಳಿಸಬೇಕಿತ್ತು ;

(ಈ) ಸದ್ಯ ಕಾಮಗಾರಿ ಯಾವ ಹಂತದಲ್ಲಿದೆ ; ವಿಳಂಬಕ್ಕೆ ಕಾರಣಗಳೇನು ;

(ಉ) ಪ್ರಸ್ತುತ ಯಲಗುರ್ಬಾ ಪಟ್ಟಣದಲ್ಲಿ ಕುಡಿಯುವ ನೀರಿನ ಸರಬರಾಜು ಯಾವ ರೀತಿ ನಡೆಯುತ್ತಿದೆ ?

## ಪಶು ಆಸ್ಪತ್ರೆಗಳು ಮತ್ತು ಖಾಲಿ ಹುದ್ದೆಗಳು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೪೩೫ (೬೬೭) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿರುವ ಸ್ಪೆಷಾಲಿಟಿ ಪಶು ಚಿಕಿತ್ಸಾಲಯಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಸ್ಪೆಷಾಲಿಟಿ ಪಶು ಆಸ್ಪತ್ರೆಗಳಲ್ಲಿರುವ ಸಿಬ್ಬಂದಿಗಳ ವಿವರ ನೀಡುವುದು ;

(ಇ) ಕೊಪ್ಪಳ ಜಿಲ್ಲೆಯಲ್ಲಿರುವ ಪಶು ಆಸ್ಪತ್ರೆಗಳಲ್ಲಿ ವೈದ್ಯರ ಹುದ್ದೆಗಳ ವಿವರ, ಖಾಲಿ ಇರುವ ಹುದ್ದೆಗಳ ವಿವರಗಳನ್ನು ನೀಡುವುದು ;

(ಈ) ಖಾಲಿ ಇರುವ ಹುದ್ದೆಗಳ ಭರ್ತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

## ಅತ್ಯಾಚಾರ ಪ್ರಕರಣಗಳು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೪೩೬ (೬೬೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ೧ ವರ್ಷದಲ್ಲಿ ನಡೆದ ಅತ್ಯಾಚಾರ ಪ್ರಕರಣಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಸದರಿ ಪ್ರಕರಣಗಳಲ್ಲಿ ಬಂಧನಕ್ಕೊಳಗಾದವರ ಸಂಖ್ಯೆ ಮತ್ತು ವಿವರಗಳನ್ನು ನೀಡುವುದು ;

(ಇ) ಈ ರೀತಿಯ ಅತ್ಯಾಚಾರ ಪ್ರಕರಣಗಳನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ಅತ್ಯಾಚಾರ ಪ್ರಕರಣ ಸಾಬೀತಾಗಿ ಶಿಕ್ಷೆಯಾದ ಪ್ರಕರಣಗಳ ಸಂಖ್ಯೆ ಎಷ್ಟು (ವಿವರ ನೀಡುವುದು) ?

## ಶ್ರೀ ದೇವರ ದಾಸಿಮಯ್ಯ ನವರ ಪ್ರಾಧಿಕಾರದ ರಚನೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು) :–**

೪೩೭ (೫೬೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ರಚನೆಯಾಗಿರುವ ಪ್ರಾಧಿಕಾರಗಳು ಯಾವುವು ;

(ಆ) ಯಾವ ಮಾನದಂಡದ ಮೇಲೆ ಪ್ರಾಧಿಕಾರ ರಚನೆ ಮಾಡಲಾಗಿದೆ ;

(ಇ) ಪ್ರಥಮವಾಗಿ ಬಟ್ಟೆ ತಯಾರು ಮಾಡಿದ ವಚನಕಾರರಾದ ಶ್ರೀ ದೇವರ ದಾಸಿಮಯ್ಯ ಪ್ರಾಧಿಕಾರ ರಚನೆ ಮಾಡಲು ಇರುವ ತೊಂದರೆ ಏನು ;

(ಈ) ಹಲವಾರು ಹಿಂದಿನ ಸರ್ಕಾರಗಳೂ ನೇಕಾರರನ್ನು ಅಲಕ್ಷಿಸಿದಂತೆ ಈ ಸರ್ಕಾರವೂ ಅಲಕ್ಷಿಸುವುದೇ ;

(ಉ) ಹಾಗಿಲ್ಲದಿದ್ದಲ್ಲಿ ಕೂಡಲೇ ಶ್ರೀ ದೇವರ ದಾಸಿಮಯ್ಯ ಪ್ರಾಧಿಕಾರ ರಚನೆ ಮಾಡುವ ಕ್ರಮವನ್ನು ಕೈಗೊಳ್ಳಲಾಗುವುದೇ ?

## ಬಹುಮಹಡಿ ಕಟ್ಟಡಗಳ ನಿರ್ಬಂಧ

**ಶ್ರೀ ಎಂ. ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು) :-**

೪೩೮ (೬೬೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೫ ವರ್ಷಗಳಲ್ಲಿ ಬೆಂಗಳೂರಿನಲ್ಲಿ ಬಹುಮಹಡಿ ಕಟ್ಟಡಗಳಿಗೆ ನೀಡಿರುವ ಅನುಮತಿ ಎಷ್ಟು ; ಯಾವುವು (ಪೂರ್ಣ ವಿವರ ನೀಡುವುದು) ;

(ಆ) ಹಲವಾರು ವರ್ಷಗಳಿಂದ ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ, ರಸ್ತೆ, ಟ್ರಾಫಿಕ್, ಜನಜೀವನ ಅಸ್ತವ್ಯಸ್ತ ಪರಿಸ್ಥಿತಿಯಿರುವಾಗ ಮುಂದೆಯೂ ಬಹುಮಹಡಿ ಕಟ್ಟಡಕ್ಕೆ ಅನುಮತಿ ನೀಡುತ್ತಿದ್ದರೆ ಸಮಸ್ಯೆಯಲ್ಲವೇ ;

(ಇ) ಹಾಗಿದ್ದಲ್ಲಿ, ಹೊರವಲಯದಲ್ಲಿ ಹೊಸನಗರ ಸ್ಥಾಪಿಸಲು ಸರ್ಕಾರ ಯೋಚನೆ ಮಾಡಿದೆಯೇ ;

(ಈ) ಇದಕ್ಕಾಗಿ ಬೆಂಗಳೂರು ಸುತ್ತಮುತ್ತ ಜಾಗ ಗುರುತಿಸಲಾಗಿದೆಯೇ ?

## ಸಿ.ಎಸ್. ಪುರ ಪೊಲೀಸ್ ಠಾಣೆಯಲ್ಲಿ ಕ್ರಮ ಕೈಗೊಂಡಿರುವ ಬಗ್ಗೆ

**ಶ್ರೀ ಎಂ. ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು) :–**

೪೩೯ (೬೬೦) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಸಿ.ಎಸ್. ಪುರ ಪೊಲೀಸ್ ಠಾಣೆಯಲ್ಲಿ ಇತ್ತೀಚಿನ ದಿನಗಳಲ್ಲಿ ತಪ್ಪು ಮಾಡಿದವರ ಮೇಲೆ ಕ್ರಮ ಕೈಗೊಂಡಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ವಿನಾಕಾರಣ ಆ ಠಾಣೆಯಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳ ವಿರುದ್ಧ ಜನಪ್ರತಿನಿಧಿಗಳು ಧರಣಿ ನಡೆಸಿರುವರೇ ;

(ಇ) ಈ ಕಾರಣ ನೀಡಿ, ಸಮರ್ಪಕವಾದ ಕ್ರಮ ಜರುಗಿಸಿರುವ ಅಧಿಕಾರಿಗಳನ್ನು ಬೇರೆ ಕಡೆಗೆ ವರ್ಗಾಯಿಸಲಾಗಿದೆಯೇ ;

(ಈ) ಹಾಗಿದ್ದರೆ, ಪ್ರಾಮಾಣಿಕವಾಗಿ ಕೆಲಸ ಮಾಡುವ ನೌಕರರನ್ನು ವರ್ಗಾ ಮಾಡಿರುವ ಬಗ್ಗೆ ಕಾರಣವೇನು ; ಈ ಅಧಿಕಾರಿಗಳ ವರ್ಗಾವಣೆಯನ್ನು ರದ್ದು ಮಾಡಿ, ಪುನಃ ಅದೇ ಜಾಗಕ್ಕೆ ವರ್ಗಾಯಿಸಲು ಕ್ರಮ ಕೈಗೊಳ್ಳಲಾಗುವುದೇ ?

## ವಲಗೇರಹಳ್ಳಿ ಫ್ಲಾಟ್‌ನಿಂದ ನಂದಿನಿ ಬಡಾವಣೆ ಇ.ಡಬ್ಲ್ಯೂ.ಎಸ್. ಫ್ಲಾಟ್ ಬದಲಾವಣೆ

**ಶ್ರೀ ಎಂ. ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು) :–**

೪೪೦ (೫೬೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಲಗೇರಹಳ್ಳಿ ಫ್ಲಾಟ್ ಹಾಗೂ ನಂದಿನಿ ಬಡಾವಣೆ ಫ್ಲಾಟ್ ಯಾವಾಗ ನಿರ್ಮಾಣ ಮಾಡಲಾಯಿತು ; ಯಾವ ವರ್ಗಕ್ಕೆ ಮಾಡಲಾಯಿತು ;

(ಆ) ವಲಗೇರಹಳ್ಳಿಯಿಂದ ನಂದಿನಿ ಬಡಾವಣೆಗೆ ಬದಲಾವಣೆ ಕೋರಿ ಬಂದ ಅರ್ಜಿಗಳೆಷ್ಟು ; ಯಾವ ಮಾನದಂಡದ ಮೂಲಕ ಬದಲಾವಣೆ ಮಾಡಲಾಯಿತು ;

(ಇ) ಬದಲಾವಣೆ ಮಾಡಿರುವ ಫ್ಲಾಟ್‌ಗಳ ಸಂಖ್ಯೆ ಎಷ್ಟು ; ಬದಲಾವಣೆ ಮಾಡಲು ಕೋರಿರುವ ದಿನಾಂಕ ಯಾವುವು ; ಶಿಫಾರಸ್ಸು

ಮಾಡಿದವರ್ಯಾರು ; ಬದಲಾವಣೆ ಮಾಡಿದ ಆದೇಶದ ದಿನಾಂಕ ತಿಳಿಸುವುದು ;

(ಈ) ನೇರ ಅರ್ಜಿದಾರರ ಕೋರಿಕೆ ಮೇರೆಗೆ ವರ್ಗಾವಣೆ ಮಾಡಲಾಗಿದೆಯೇ ; (ಪೂರ್ಣ ವಿವರ ನೀಡುವುದು) ;

(ಉ) ಮುಖ್ಯಮಂತ್ರಿಗಳ ಆದೇಶವನ್ನು ಉಲ್ಲಂಘಿಸಿರುವ ಅಧಿಕಾರಿಗಳ ವಿರುದ್ಧ ಹಾಗೂ ಭ್ರಷ್ಟಾಚಾರ ಮಾಡಿದ್ದರೆ ಅವರ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದೇ ?

## ಭಾರೀ ಮತ್ತು ಮಧ್ಯಮ ಕೈಗಾರಿಕೆ ಸ್ಥಾಪನೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :-**

೪೪೧ (೫೬೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕು ಕೇಂದ್ರಗಳ ನಿರುದ್ಯೋಗ ಸಮಸ್ಯೆ ನಿವಾರಿಸಲು ಯಾವುದಾದರೂ ಭಾರೀ/ಮಧ್ಯಮ ಕೈಗಾರಿಕೆಯನ್ನು ಸ್ಥಾಪಿಸುವ ಮಹತ್ವ ಉದ್ದೇಶ ಸರ್ಕಾರಕ್ಕಿದೆಯೇ ;

(ಆ) ಹಾಗಿದ್ದಲ್ಲಿ, ಸರ್ಕಾರವು ಯಾವ ಯಾವ ರೀತಿಯಲ್ಲಿ ಕೈಗಾರಿಕೆ ಸ್ಥಾಪಿಸಲಾಗುವುದು ; ಎಷ್ಟು ಜನರಿಗೆ ಉದ್ಯೋಗ ಕಲ್ಪಿಸಲಾಗುವುದು ;

(ಇ) ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಕೈಗಾರಿಕಾ ವಲಯವನ್ನು ಹೊಸದಾಗಿ ಗುರ್ತಿಸಿ, ಭೂ ಸ್ವಾಧೀನಪಡಿಸಿಕೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ ;

(ಈ) ಹಾಗಿದ್ದರೆ, ಯಾವ ತಾಲ್ಲೂಕಿನ ಯಾವ ಹೋಬಳಿಯಲ್ಲಿ ಎಷ್ಟು ವಿಸ್ತೀರ್ಣದ ಭೂ–ಸ್ವಾಧೀನ ಪಡಿಸಿಕೊಳ್ಳಲಾಗುವುದು ; ಯಾವಾಗ ಈ ಯೋಜನೆ ಪ್ರಾರಂಭಿಸಲಾಗುವುದು (ತಾಲ್ಲೂಕುವಾರು ಮಾಹಿತಿ ನೀಡುವುದು) ?

## ಹೈದ್ರಾಬಾದ್ ಕರ್ನಾಟಕ ಪ್ರದೇಶದ ಸಿಬ್ಬಂದಿಗೆ ಬಡ್ತಿ ನೀಡಿಕೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೪೨ (೫೭೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೇರಿದ ಎಷ್ಟು ಸಿಬ್ಬಂದಿ ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ (ವೃಂದವಾರು ವಿವರ ನೀಡುವುದು) ಇವರ ಒಟ್ಟು ಸಂಖ್ಯೆ ಸಚಿವಾಲಯದ ವೃಂದವಲ್ಲದ ಎಷ್ಟು ಶೇಕಡಾ ಆಗಿರುತ್ತದೆ (ವಿವರ ಒದಗಿಸುವುದು) ;

(ಆ) ಸಂವಿಧಾನದ ತಿದ್ದುಪಡಿಯನುಸಾರ ರೂಪಿಸಲಾದ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಸಿಬ್ಬಂದಿಗೆ ಬಡ್ತಿ ನೀಡುವ ನಿಯಮಗಳ ವಿರುದ್ಧ ಕೆಲವು ಸಚಿವಾಲಯದ ಸಿಬ್ಬಂದಿ ಕೆ.ಎ.ಟಿ. ಮೊರೆ ಹೋಗಿ ಇತ್ತೀಚಿನ ಬಡ್ತಿ ಪ್ರಸ್ತಾವನೆಗಳಿಗೆ ತಡೆಯಾಜ್ಞೆ ತಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಅದನ್ನು ತೆರವುಗೊಳಿಸಿ ಬಡ್ತಿ ಪ್ರಕ್ರಿಯೆ ಮುಂದುವರೆಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಈ) ಹೈದ್ರಾಬಾದ್ ಕರ್ನಾಟಕ ಪ್ರದೇಶದ ಸಿಬ್ಬಂದಿಗಳ ಹಿತಾಸಕ್ತಿಗಳನ್ನೂ ಕಾಪಾಡಲು ಸರ್ಕಾರ ಬದ್ಧವಾಗಿದೆಯೇ (ಮಾಹಿತಿ ನೀಡುವುದು) ?

## ಕಾರಾಗೃಹಗಳಲ್ಲಿ ಖೈದಿಗಳ ನಿಗೂಢ ಸಾವು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೪೩ (೫೬೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ಕಾರಾಗೃಹಗಳಿವೆ ; ಅವು ಎಲ್ಲೆಲ್ಲಿವೆ ; ಅವುಗಳಲ್ಲಿ ಎಷ್ಟು ಜನ ಖೈದಿಗಳಿದ್ದಾರೆ (ಪ್ರತ್ಯೇಕ ಕಾರಾಗೃಹವಾರು, ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು) ;

(ಆ) ಬಂದಿಯಾಗಿದ್ದ ಖೈದಿಗಳ ಪೈಕಿ ಹಾಗೂ ನ್ಯಾಯಾಂಗ ಬಂಧನದಲ್ಲಿದ್ದಂತಹ ಆರೋಪಿಗಳು ಸಾವಿಗೀಡಾಗಿರುವುದು, ಆತ್ಮಹತ್ಯೆಯಂತಹ ಪ್ರಕರಣಗಳು ರಾಜ್ಯದಲ್ಲಿ ಯಾವ ಯಾವ ಜೈಲುಗಳಲ್ಲಿ ಬೆಳಕಿಗೆ ಬಂದಿದೆ (ಜಿಲ್ಲಾವಾರು, ಠಾಣಾವಾರು ಮಾಹಿತಿ ನೀಡುವುದು) ;

(ಇ) ಈ ಖೈದಿಗಳ ಮೇಲೆ ವಿಚಾರಣೆ ನೆಪದಲ್ಲಿ ಕಿರುಕುಳ ಹಲ್ಲೆ, ದೈಹಿಕ ಹಿಂಸೆ ಇತ್ಯಾದಿ ಘಟನೆಗಳು ಜರುಗಿವೆಯೇ ; ಇದಕ್ಕೆ ಕಾರಣರಾರು ; ಇಂತಹ ಪ್ರಕರಣಗಳಲ್ಲಿ ಭಾಗಿಯಾದವರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ ; ಇಂತಹ ಪ್ರಕರಣಗಳ ತನಿಖೆಯನ್ನು ರಾಜ್ಯ ಸರ್ಕಾರ ಮಾಡಿದೆಯೇ ; ಈ ರೀತಿ ಪ್ರಕರಣಗಳು ಜರುಗದಂತೆ ಸರ್ಕಾರ ಯಾವ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ (ಮಾಹಿತಿ ನೀಡುವುದು) ?

## ನೂತನ ಪಶು ವೈದ್ಯಕೀಯ ಆಸ್ಪತ್ರೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :-**

೪೪೪ (೫೬೭) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಜಿಲ್ಲೆಯಲ್ಲಿನ ೬ ವಿಧಾನ ಸಭಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಪಶು ಆಸ್ಪತ್ರೆಗಳೆಷ್ಟು ; ಈ ಜಿಲ್ಲೆಯಲ್ಲಿ ಎಷ್ಟು ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ ; ಪದನಾಮದೊಂದಿಗೆ ಮತ್ತು ಯಾರು ಯಾವ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದಾರೆ (ವಿವರ ನೀಡುವುದು) ;

(ಆ) ಜಿಲ್ಲೆಯಲ್ಲಿರುವ ವಿವಿಧ ದರ್ಜೆಯ ಪಶುಸಂಗೋಪನಾ ಚಿಕಿತ್ಸಾಲಯಗಳೆಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಇ) ಬೀದರ್ ಜಿಲ್ಲೆಯಲ್ಲಿನ ಪಶು ಸಂಪತ್ತನ್ನು ಅಭಿವೃದ್ಧಿಪಡಿಸಲು ಮತ್ತು ಕೃಷಿ ಕ್ಷೇತ್ರಕ್ಕೆ ಬೆನ್ನೆಲುಬಾಗಿರುವ ಪಶು ಸಂಪತ್ತನ್ನು ರೋಗಗಳಿಂದ ಸಂರಕ್ಷಿಸಲು ಗ್ರಾಮಾಂತರ ಪ್ರದೇಶಗಳಲ್ಲಿರುವ ಪಶು ಚಿಕಿತ್ಸಾಲಯಗಳನ್ನು ಮೂಲಭೂತ ಸೌಕರ್ಯಗಳೊಂದಿಗೆ ಸುವ್ಯವಸ್ಥಿತವಾಗಿರಿಸಲು ಸರ್ಕಾರದ ಕ್ರಮಗಳೇನು (ಸಂಪೂರ್ಣವಾದ ಮಾಹಿತಿ ನೀಡುವುದು) ?

## ಮೂಲೆ ಹೊಳೆ ಚೆಕ್‌ಪೋಸ್ಟ್ ಸ್ಥಗಿತ

**ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೪೪೫ (೫೭೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗುಂಡ್ಲುಪೇಟೆ ತಾಲ್ಲೂಕು, ಮೂಲೆ ಹೊಳೆ ಪೊಲೀಸ್ ಚೆಕ್ ಪೋಸ್ಟ್‌ನ್ನು ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದಕ್ಕೆ ಕಾರಣಗಳೇನು ;

(ಆ) ಇದರಿಂದ ಕಳ್ಳ ಸಾಗಾಣಿಕೆ ಮತ್ತು ಇತರ ಅಪರಾಧ ಚಟುವಟಿಕೆಗಳಿಗೆ ಆಸ್ಪದ ಮಾಡಿದಂತೆ ಆಗುವುದಿಲ್ಲವೇ ;

(ಇ) ರಾತ್ರಿ ೯ ರಿಂದ ಬೆಳಗ್ಗೆ ೬ರವರೆಗೆ ಈ ರಸ್ತೆಯಲ್ಲಿ ವಾಹನ ಸಂಚಾರ ನಿಷೇಧ ಇದ್ದು, ಚೆಕ್‌ಪೋಸ್ಟ್ ಸ್ಥಗಿತದಿಂದ ವಾಹನಗಳು ಸಂಚರಿಸುತ್ತಿರುವುದು ಹಾಗೂ ಕಳ್ಳ ಸಾಗಾಣಿಕೆ ಮೊದಲಾದ ಅಪರಾಧ ಚಟುವಟಿಕೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಮೂಲೆ ಹೊಳೆ ಚೆಕ್‌ಪೋಸ್ಟ್‌ನ್ನು ಪುನರ್ ಪ್ರಾರಂಭಿಸಿ, ಸುಸಜ್ಜಿತಗೊಳಿಸಿ ಪೂರ್ಣ ಪ್ರಮಾಣದ ಸಿಬ್ಬಂದಿಯನ್ನು ನೇಮಿಸಿ, ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಕ್ರಮ ತೆಗೆದುಕೊಳ್ಳಲಾಗುವುದೇ ?

03362-3

## ಮಂದಗತಿಯಲ್ಲಿ ಒಳಚರಂಡಿ ಕಾಮಗಾರಿಗಳು

**ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೪೪೬ (೫೭೩) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಾಮರಾಜನಗರ ಪಟ್ಟಣದ ಒಳಚರಂಡಿ ಯೋಜನೆಯಲ್ಲಿ ಇನ್ನು ಬಾಕಿ ಉಳಿದಿರುವ ಕಾಮಗಾರಿಗಳು ಯಾವುವು ; ಈ ಕಾಮಗಾರಿಗಳನ್ನು ಎಷ್ಟು ದಿವಸಗಳ ಒಳಗೆ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಈ ಸೌಲಭ್ಯ ಒದಗಿಸಲಾಗುವುದು ;

(ಆ) ಈ ಕಾಮಗಾರಿಗಳು ಬಹಳ ನಿಧಾನಗತಿಯಿಂದ ನಡೆಯುತ್ತಿದ್ದು ವಾಹನ ಸಂಚಾರಕ್ಕೆ ಸಾರ್ವಜನಿಕರ ಓಡಾಟಕ್ಕೆ ತೀವ್ರ ತೊಂದರೆ ಆಗಿರುವುದು ಗಮನಕ್ಕೆ ಬಂದಿದೆಯೇ ;

(ಇ) ಈ ಬಗ್ಗೆ ಚಾಮರಾಜನಗರ ನಗರ ಸಭೆ ಸದಸ್ಯರು ಪಕ್ಷಭೇದ ಮರೆತು ತೀವ್ರ ಅತೃಪ್ತಿ ವ್ಯಕ್ತ ಪಡಿಸಿರುವುದು ನಾಗರಿಕರು ಪ್ರತಿಭಟಿಸುತ್ತಿರುವುದು ಗಮನಕ್ಕೆ ಬಂದಿದೆಯೇ ;

(ಈ) ಮಳೆಗಾಲ ಪ್ರಾರಂಭವಾದಲ್ಲಿ, ಪರಿಸ್ಥಿತಿ ತೀವ್ರವಾಗಿ ಬಿಗಡಾಯಿಸುತ್ತಿರುವ ಕಾರಣ ಈ ಕಾಮಗಾರಿಗಳನ್ನು ಬೇಗ ಪೂರ್ಣಗೊಳಿಸಿ, ಈ ಕಾಮಗಾರಿಗೆ ತೆಗೆದಿರುವ ಗುಂಡಿಗಳನ್ನು ಕಾಲುವೆಗಳನ್ನು ಮುಚ್ಚಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುವುದೇ ?

## ಮಲೈ ಮಹದೇಶ್ವರ ದೇವಾಲಯದ ವತಿಯಿಂದ ಬಸ್ ಸೌಲಭ್ಯ ಸೇವೆ

**ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೪೪೭ (೫೭೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಲೈ ಮಹದೇಶ್ವರ ದೇವಾಲಯದ ಸಮಿತಿಯು ವತಿಯಿಂದ ಯಾತ್ರಿಕರಿಗಾಗಿ ಕೊಳ್ಳೇಗಾಲ ಮತ್ತು ಬೆಂಗಳೂರಿಗೆ ಬಸ್‌ಗಳನ್ನು ಓಡಿಸಲಾಗುತ್ತಿದೆಯೇ ; ಎಷ್ಟು ಬಸ್‌ಗಳನ್ನು ಓಡಿಸಲಾಗುತ್ತಿದೆ (ವೇಳಾ ಪಟ್ಟಿ ಇತ್ಯಾದಿ ವಿವರಗಳನ್ನು ಒದಗಿಸುವುದು) ;

(ಆ) ಕಳೆದ ಮೂರು ವರ್ಷಗಳಲ್ಲಿ ಈ ಬಸ್‌ಗಳಿಂದ ದೇವಾಲಯ ಸಮಿತಿಗೆ ಆದ ಲಾಭ ನಷ್ಟಗಳೇನು (ಪ್ರತಿ ವರ್ಷದ ವಿವರ ಒದಗಿಸುವುದು ರಿಪೇರಿ, ನಿರ್ವಹಣೆ, ವೇತನ ಇತ್ಯಾದಿ ಸೇರಿ) ;

(ಇ) ಈ ಬಸ್‌ಗಳಿಗೆ ಒದಗಿಸಿರುವ ಸಿಬ್ಬಂದಿ (ಚಾಲಕರು, ನಿರ್ವಾಹಕರು, ಸ್ವಚ್ಛತಕಾರರು ಇತ್ಯಾದಿ) ಹುದ್ದೆಗಳ ಸಂಖ್ಯೆ ಎಷ್ಟು ; ಇವರಿಗೆ ನೀಡುತ್ತಿರುವ ವೇತನ ಎಷ್ಟು (ವಿವರ ಒದಗಿಸುವುದು) ?

## ಸ್ಥಳೀಯರಿಗೆ ಕೈಗಾರಿಕೆಗಳಲ್ಲಿ ಉದ್ಯೋಗ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೪೮ (೫೭೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೩-೧೪ರಲ್ಲಿ ಕೋಲಾರ ಜಿಲ್ಲೆಯಲ್ಲಿ ಸ್ಥಾಪಿತವಾಧ ಕೈಗಾರಿಕೆಗಳು ಎಷ್ಟು; ಅವು ಯಾವುವು ;

(ಆ) ಈ ಕೈಗಾರಿಕೆಗಳಲ್ಲಿ ಸೃಷ್ಟಿಯಾದ ಉದ್ಯೋಗಾವಕಾಶವೆಷ್ಟು;

(ಇ) ಸದರಿ ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡಲಾಗಿದೆಯೇ; ಕನ್ನಡಿಗರಿಗೆ ನೀಡಿದ್ದರೆ, ಯಾವ ಯಾವ ಕಂಪನಿ ಎಷ್ಟೆಷ್ಟು ಉದ್ಯೋಗ ನೀಡಿವೆ (ವಿವರ ನೀಡುವುದು)?

## ಹೊರಗುತ್ತಿಗೆ ನೇಮಕಾತಿ ಆದೇಶದ ರದ್ಧತಿ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :--**

೪೪೯ (೭೧೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ವಿವಿಧ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವುದರಿಂದ ಇಲಾಖೆಯ ಕೆಲಸಗಳು ಕುಂಠಿತಗೊಳ್ಳಲು ಅವಕಾಶ ನೀಡಿದಂತಾಗುವುದಿಲ್ಲವೇ;

(ಇ) ಸುಮಾರು ವರ್ಷಗಳಿಂದ ಹಲವಾರು ಇಲಾಖೆಗಳಲ್ಲಿ ಸಾವಿರಾರು ಹುದ್ದೆಗಳು ಖಾಲಿ ಇದ್ದರೂ ಸಹ ಇವುಗಳನ್ನು ಬರ್ತಿ ಮಾಡದೇ ಇರುವುದರಿಂದ ನಿರುದ್ಯೋಗ ಸಮಸ್ಯೆ ಹೆಚ್ಚಾಗಲು ಅವಕಾಶ ನೀಡಿದಂತಾಗುವುದಿಲ್ಲವೇ;

(ಈ) ಹಾಗಿದ್ದಲ್ಲಿ, ವಿವಿಧ ಇಲಾಖೆಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡದೆ ಹೊರಗುತ್ತಿಗೆಯ ಮೇಲೆ ನೇಮಕ ಮಾಡಿಕೊಳ್ಳುವ ಪದ್ಧತಿಯನ್ನು ತೆಗೆದು ಹಾಕಲು ಕ್ರಮ ಕೈಗೊಳ್ಳಲಾಗುತ್ತದೆಯೇ ;

(ಉ) ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ವಿವಿಧ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಲು ಇರುವ ಅಡಚಣೆಗಳೇನು?

**ಕನ್ನಡಿಗರಿಗೆ ಬೃಹತ್ ಕೈಗಾರಿಕೆಯಲ್ಲಿ ಉದ್ಯೋಗ**

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೫೦ (೫೭೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೩–೧೪ರಲ್ಲಿ ರಾಜ್ಯದಲ್ಲಿ ಸ್ಥಾಪಿತವಾದ ಕೈಗಾರಿಕೆಗಳು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ಕೈಗಾರಿಕೆಗಳಲ್ಲಿ ಸೃಷ್ಟಿಯಾದ ಉದ್ಯೋಗಾವಕಾಶವೆಷ್ಟು;

(ಇ) ಈ ಉದ್ಯೋಗಗಳು ಯಾವ ಶ್ರೇಣಿಯವು;

(ಈ) ಈ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ನೀಡಿದ ಉದ್ಯೋಗಾವಕಾಶವೆಷ್ಟು; ಅವು ಯಾವ ಶ್ರೇಣಿಯವು?

**ಕರ್ನಾಟಕ ದಿನಗೂಲಿ ಕ್ಷೇಮಾಭಿವೃದ್ಧಿ ನಿಯಮ ೨೦೧೩ನ್ನು ಜಾರಿಗೊಳಿಸುವ ಕುರಿತು**

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೫೧ (೬೧೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೧೯೮೪ರ ನಂತರ ನೇಮಕಗೊಂಡು ವಿವಿಧ ಇಲಾಖೆ ಮತ್ತು ನಿಗಮ ಮಂಡಲಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ

ನೌಕರರ ಸಂಖ್ಯೆ ಎಷ್ಟು; (ಇಲಾಖಾವಾರು ಮತ್ತು ನಿಗಮ, ಮಂಡಳಿವಾರು ವಿವರ ನೀಡುವುದು)

(ಆ) ಈ ಪೈಕಿ ದಿನಾಂಕ ೨೦೦೬ರ ಏಪ್ರಿಲ್ ೧೦ಕ್ಕೆ, ೧೦ ವರ್ಷ ಪೂರ್ಣಗೊಳಿಸಿ ನಿವೃತ್ತಿ ಮತ್ತು ಮರಣ ಹೊಂದಿದವರ ಸಂಖ್ಯೆ ಎಷ್ಟು (ಇಲಾಖಾವಾರು ಮತ್ತು ನಿಗಮ, ಮಂಡಳಿವಾರು ವಿವರ ನೀಡುವುದು) ;

(ಇ) ದಿನಾಂಕ ೨೦೧೩ರ ಫೆಬ್ರವರಿ ೧೫ಕ್ಕೆ ಮತ್ತು ನಂತರ ಇದುವರೆವಿಗೂ ೧೦ ವರ್ಷ ಪೂರ್ಣಗೊಳಿಸಿ ನಿವೃತ್ತಿ ಮತ್ತು ಮರಣ ಹೊಂದಿದವರ ಸಂಖ್ಯೆ ಎಷ್ಟು (ಇಲಾಖಾವಾರು ಮತ್ತು ನಿಗಮ, ಮಂಡಳಿವಾರು ವಿವರ ನೀಡುವುದು) ;

(ಈ) ದೀರ್ಘಕಾಲ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸಿ ನಿವೃತ್ತಿ ಮತ್ತು ಮರಣ ಹೊಂದಿದವರ ನೌಕರರಿಗೆ ಯಾವುದಾದರು ಸಾಮಾಜಿಕ ಮತ್ತು ಆರ್ಥಿಕ ಸವಲತ್ತುಗಳನ್ನು ಸರ್ಕಾರದಿಂದ ಒದಗಿಸಲಾಗಿದೆಯೇ ;

(ಉ) ದಿನಾಂಕ ೨೦೦೬ರ ಏಪ್ರಿಲ್, ೧೦ಕ್ಕೆ ೧೦ ವರ್ಷ ಪೂರ್ಣಗೊಳಿಸಿ ಖಾಯಂಗೊಂಡ ನೌಕರರ ಸಂಖ್ಯೆ ಎಷ್ಟು (ಇಲಾಖಾವಾರು ಮತ್ತು ನಿಗಮ, ಮಂಡಳಿವಾರು ವಿವರ ನೀಡುವುದು) ;

(ಊ) ಸರ್ವೋಚ್ಚ ನ್ಯಾಯಾಲಯ ಆದೇಶ ನೀಡಿದ ನಂತರ (ದಿನಾಂಕ ೨೦೦೬ರ ಏಪ್ರಿಲ್, ೧೦) ಖಾಯಂಗೊಂಡ ನೌಕರರ ಸಂಖ್ಯೆ ಎಷ್ಟು (ಇಲಾಖಾವಾರು ಮತ್ತು ನಿಗಮ, ಮಂಡಳಿವಾರು ವಿವರ ನೀಡುವುದು) ?

(ಋ) ಪ್ರತಿಯೊಂದು ಇಲಾಖೆಯ ಪ್ರಗತಿ ಪರಿಶೀಲನಾ ಮಾಡುವ ಮುಖ್ಯಮಂತ್ರಿಗಳು ತಮ್ಮ ಅಧೀನಕ್ಕೆ ಒಳಪಡುವ ಇಲಾಖೆಯ ವಿಷಯುವಾದ "ಕರ್ನಾಟಕ ದಿನಗೂಲಿ ಕ್ಷೇಮಾಭಿವೃದ್ಧಿ ನಿಯಮ-೨೦೧೩"ನ್ನು ಕಳೆದ ೧೬ ತಿಂಗಳಿನಿಂದ ಜಾರಿಗೆ ತರದೇ ತಮ್ಮಲ್ಲೇ ಉಳಿಸಿಕೊಂಡಿರುವುದು ಸಮಂಜಸವೇ ;

(ಎ) ಹಾಗಿದ್ದಲ್ಲಿ, ಕರ್ನಾಟಕ ದಿನಗೂಲಿ ಕ್ಷೇಮಾಭಿವೃದ್ಧಿ ನಿಯಮ-೨೦೧೩ನ್ನು ಶೀಘ್ರವಾಗಿ ಜಾರಿಗೊಳಿಸಲು ಕ್ರಮ ವಹಿಸಲಾಗುವುದೇ ?

## ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಹಂದಿಗಳ ನಿಯಂತ್ರಣ

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :-**

೪೫೨ (೫೭೮) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಹಂದಿಗಳ ಕಾಟ ವಿಪರಿತವಾಗಿದ್ದು, ಜನರಿಗೆ ಅನೇಕ ರೀತಿಯಿಂದ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಇದನ್ನು ನಿಯಂತ್ರಿಸಲು ಮಹಾನಗರ ಪಾಲಿಕೆ ಏನು ಕ್ರಮ ತೆಗೆದುಕೊಂಡಿದೆ ;

(ಆ) ಅವಳಿ ನಗರದಲ್ಲಿ ೨೫೦೦೦ಕ್ಕಿಂತ ಅಧಿಕ ಹಂದಿಗಳಿದ್ದು ಕಳೆದ ೧ ವರ್ಷದಿಂದ ಇಲ್ಲಿಯವರೆಗೆ ರಸ್ತೆಗಳಲ್ಲಿ ಹಂದಿಗಳು ದಾಳಿ ಮಾಡಿರುವುದರಿಂದ ಸುಮಾರು ೧೫ ರಿಂದ ೨೦ ಜನ ಪ್ರಾಣ ಕಳೆದುಕೊಂಡಿದ್ದು ನಿಜವೇ ;

(ಇ) ಕಳೆದ ಅನೇಕ ವರ್ಷಗಳಿಂದ ಹಂದಿಗಳ ನಿಯಂತ್ರಣ ಕಾರ್ಯಾಚರಣೆ ಮಾಡಿ ಅರ್ಧಕ್ಕೆ ಕಾರ್ಯಾಚರಣೆ ನಿಲ್ಲಿಸಲು ಕಾರಣವೇನು; ಶಾಲೆಗೆ ಹೋಗುತ್ತಿರುವ ಮಕ್ಕಳಿಗೆ, ಮಹಿಳೆಯರಿಗೆ ಹಾಗೂ ವೃದ್ಧರ ಮೇಲೆ ದಾಳಿ ಮಾಡಿದ್ದು, ಸಾರ್ವಜನಿಕರು ದೂರು ಕೊಟ್ಟರೂ ಕ್ರಮ ಕೈಗೊಳ್ಳದಿರಲು ಕಾರಣಗಳೇನು ?

**ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯು ಪಡೆದಿರುವ ಸಾಲ**

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೪೫೩ (೫೭೭) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ರಾಜ್ಯದ ವಿವಿಧ ಬ್ಯಾಂಕುಗಳಲ್ಲಿ ಎಷ್ಟು ಸಾಲ ಪಡೆದಿದೆ; ಯಾರಿಂದ ಯಾವ ದಿನಾಂಕದಂದು ಸಾಲ ಪಡೆಯಲಾಗಿದೆ ಮತ್ತು ಈ ಹಣವನ್ನು ಯಾವ ಕಾರಣಕ್ಕಾಗಿ ಖರ್ಚು ಮಾಡಲಾಗಿದೆ (ಸಂಪೂರ್ಣ ಮಾಹಿತಿ ನೀಡುವುದು) ;

(ಆ) ಸದರಿ ಸಾಲಕ್ಕೆ ಇಲ್ಲಿಯವರೆಗೆ ಎಷ್ಟು ಹಣವನ್ನು ಬಡ್ಡಿ ರೂಪದಲ್ಲಿ ಮಹಾನಗರ ಪಾಲಿಕೆ ಸಂದಾಯ ಮಾಡಿದೆ ;

(ಇ) ಈ ಮಹಾನಗರ ಪಾಲಿಕೆಗೆ ಸ್ಥಳೀಯ ನಾಗರೀಕರು ಹೆಚ್ಚು ತೆರಿಗೆಯನ್ನು ಕೊಡುತ್ತಿದ್ದು, ಹಣಕಾಸಿನ ವಿಷಯದಲ್ಲಿ ಸುಸ್ಥಿತಿಯಲ್ಲಿದ್ದ ಪಾಲಿಕೆಯು ಸಾಲ ಪಡೆಯಲು ಕಾರಣವೇನು ?

# ಕರ್ನಾಟಕ ದಿನಗೂಲಿ ಕ್ಷೇಮಾಭಿವೃದ್ಧಿ ನಿಯಮ ೨೦೧೩ನ್ನು ಜಾರಿಗೊಳಿಸುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೪೫೪ (೫೮೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ದಿನಗೂಲಿ ಕ್ಷೇಮಾಭಿವೃದ್ಧಿ ನಿಯಮ-೨೦೧೩ನ್ನು ಅನುಷ್ಠಾನಗೊಳಿಸುವ ಸಲುವಾಗಿ ಆಯಾ ಸಂಬಂಧಪಟ್ಟ ಇಲಾಖೆಯ ದಿನಗೂಲಿ ನೌಕರರ ಯಾದಿಯನ್ನು ತಯಾರಿಸಿ ಅಧಿಸೂಚನೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಇದುವರೆವಿಗೂ ಯಾವ ಯಾವ ಇಲಾಖೆಯು ಪ್ರಕಟಿಸಲಾಗಿರುತ್ತದೆ ;

(ಆ) ಇದುವರೆವಿಗೂ ಅಧಿಸೂಚನೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸದೇ ಇರುವ ಇಲಾಖೆಗಳು ಯಾವುವು ;

(ಇ) ೧೩ ತಿಂಗಳ ದೀರ್ಘ ಕಾಲ ಕಳೆದರೂ ಇದುವರೆವಿಗೂ ಪ್ರಕಟಿಸದೇ ಇರಲು ಕಾರಣಗಳೇನು ;

(ಈ) ಸರ್ಕಾರಿ ಸುತ್ತೋಲೆ ಸಂಖ್ಯೆ : ಸಿಆಸುಇ/೪೪/ಸೇಸ್ಥಅ ೨೦೧೩, ದಿನಾಂಕ ೧೦-೦೫-೨೦೧೩ ರಂದು ಅನುಬಂಧ-೧ ರಲ್ಲಿ ೮ ಮತ್ತು ೧೧ ವರೆಗೆ ಕೋರಿರುವ ಮಾಹಿತಿಗಳಾವುವು ;

(ಉ) ಅರೆ ಸರ್ಕಾರಿ ಪತ್ರ ಸಂಖ್ಯೆ : ಅಸಪ:ಸಿಆಸುಇ/೨೪/ಸೇಸ್ಥಅ ೨೦೧೪, ದಿನಾಂಕ ೩೧-೦೫-೨೦೧೪ರಂದು ಅನುಬಂಧ-೧ರಲ್ಲಿ ೩ ರಿಂದ ೯ ವರೆಗಿನ ಕಾಲಂಗಳಲ್ಲಿ ಕೋರಿರುವ ಮಾಹಿತಿಗಳಾವುವು ;

03362-4

(ಊ) ಕೇಳಿರುವ ಮಾಹಿತಿಗಳನ್ನ ಒಂದು ವರ್ಷದ ನಂತರ ಪುನರಾವರ್ತನೆಯಾಗಿ ಕೇಳುವುದರಿಂದ ಉದ್ದೇಶಿತ ಕಾರ್ಯವು ಅನುಷ್ಠಾನಗೊಳಿಸುವುದಕ್ಕೆ ವಿಳಂಬವಾಗುವುದಿಲ್ಲವೆ ;

(ಋ) ಹಾಗಿದ್ದಲ್ಲಿ, ಕರ್ನಾಟಕ ದಿನಗೂಲಿ ಕ್ಷೇಮಾಭಿವೃದ್ಧಿ ನಿಯಮ-೨೦೧೩ನ್ನು ಶೀಘ್ರವಾಗಿ ಜಾರಿಗೊಳಿಸಲು ಕ್ರಮ ವಹಿಸಲಾಗುವುದೇ ?

## ದಿನಗೂಲಿ ನೌಕರರ ಸೇವೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೪೫೫ (೫೮೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ವಿಧಾನ ಮಂಡಲ ಅನುಮೋದಿಸಿದ ವಿವಿಧ ಶಾಸನ ಮತ್ತು ಅಧಿಸೂಚನೆಗಳ ಮೂಲಕ ೧೯೮೪ರ ನಂತರ ವಿವಿಧ ಇಲಾಖೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು ೧೦ ವರ್ಷ ಪೂರ್ಣಗೊಳ್ಳದೇ ಮತ್ತು ದಿನಾಂಕ ೧೦-೦೪-೨೦೦೬ಕ್ಕೆ ಮತ್ತು ನಂತರ ಇದುವರೆವಿಗೂ ೧೦ ವರ್ಷ ಪೂರ್ಣಗೊಂಡು ಖಾಯಂ ಹೊಂದಿದ ನೌಕರರ ಸಂಖ್ಯೆ ಎಷ್ಟು; (ಇಲಾಖಾವಾರು ಪ್ರತಿಯೊಂದು ಶಾಸನ, ಅಧಿಸೂಚನೆ ಮತ್ತು ಸರ್ಕಾರಿ ಆದೇಶ ಸಂಖ್ಯೆ ತಿಳಿಸುವುದು);

(ಆ) ಕೃಷ್ಣಾ ಮೇಲ್ದಂಡೆ ನಿರ್ಮಾಣ ಯೋಜನೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು ಖಾಯಂ ನೌಕರರಾಗಿ ಕಾರ್ಯನಿರ್ವಹಿಸುತ್ತಿದ್ದ ಇಂಜಿನಿಯರ್‌ಗಳ ನೇಮಕವನ್ನು ಸುಪ್ರೀಮ್ ಕೋರ್ಟ್ ರದ್ದುಗೊಳಿಸಿದ್ದರ ಪರಿಣಾಮ ಸರ್ಕಾರವು

ವಿಶೇಷ ಶಾಸನ ಮೂಲಕ ತಿದ್ದುಪಡಿಯನ್ನು ತಂದು ಆರು ತಿಂಗಳಲ್ಲಿ ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳ ನೇಮಕವನ್ನು ಸಿಂದುಗೊಳಿಸಿ ಅನುಷ್ಠಾನಗೊಂಡಂತೆ ಕಳೆದ ೩೦ ವರ್ಷಗಳಿಂದ ಕನಿಷ್ಠ ಹುದ್ದೆಗಳಲ್ಲಿ ದಿನಗೂಲಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರ ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ನಿಯಮ-೨೦೧೩ನ್ನು ಶೀಘ್ರವಾಗಿ ಜಾರಿಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ?

**ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ನಿಯಮ-೨೦೧೩**

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೪೫೬ (೫೮೫) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ನವೆಂಬರ್ ೨೦೧೨ರ ನಂತರ ರಾಜ್ಯ ವಿಧಾನ ಮಂಡಲವು ಒಪ್ಪಿಗೆ ನೀಡಿದ ವಿವಿಧ ಮಸೂದೆ ಮತ್ತು ವಿಧೇಯಕಗಳು ಯಾವುವು ;

(ಆ) ರಾಜ್ಯಪಾಲರು ವಿಧೇಯಕಕ್ಕೆ ಅನುಮೋದನೆ ನೀಡಿದ ನಂತರ ಜಾರಿಯಾದ ಶಾಸನಗಳಾವುವು; ಹಾಗೂ ಇದುವರೆವಿಗೂ ಜಾರಿಯಾಗದೇ ಉಳಿದಿರುವ ಶಾಸನ ಅಥವಾ ಅಧಿನಿಯಮಗಳಾವುವು ;

(ಇ) ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ನಿಯಮ-೨೦೧೩ ನ್ನು ೧೬ ತಿಂಗಳಿನಿಂದ ಇದುವರೆವಿಗೂ ಜಾರಿಗೊಳಿಸದಿರಲು ಕಾರಣವೇನು ?

## ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ನಿಯಮ- ೨೦೧೩ರ ಜಾರಿ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೪೫೭ (೫೮೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೧೯೮೪ರ ನಂತರ ನೇಮಕಗೊಂಡು ವಿವಿಧ ಇಲಾಖೆ ಮತ್ತು ನಿಗಮ ಮಂಡಲಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರ ಸಂಖ್ಯೆ ಎಷ್ಟು (ಇಲಾಖಾವಾರು ಮತ್ತು ನಿಗಮ, ಮಂಡಳಿವಾರು ವಿವರ ನೀಡುವುದು) ;

(ಆ) ಈ ಪೈಕಿ ದಿನಾಂಕ ೨೦೦೬ರ ಏಪ್ರಿಲ್ ೧೦ಕ್ಕೆ, ೧೦ ವರ್ಷ ಪೂರ್ಣಗೊಳಿಸಿ ನಿವೃತ್ತಿ ಮತ್ತು ಮರಣ ಹೊಂದಿದವರ ಸಂಖ್ಯೆ ಎಷ್ಟು (ಇಲಾಖಾವಾರು ಮತ್ತು ನಿಗಮ, ಮಂಡಳಿವಾರು ವಿವರ ನೀಡುವುದು) ;

(ಇ) ದಿನಾಂಕ ೨೦೧೩ರ ಫೆಬ್ರವರಿ ೧೫ಕ್ಕೆ ಮತ್ತು ನಂತರ ಇದುವರೆವಿಗೂ, ೧೦ ವರ್ಷ ಪೂರ್ಣಗೊಳಿಸಿ ನಿವೃತ್ತಿ ಮತ್ತು ಮರಣ ಹೊಂದಿದವರ ಸಂಖ್ಯೆ ಎಷ್ಟು; (ಇಲಾಖಾವಾರು ಮತ್ತು ನಿಗಮ, ಮಂಡಳಿವಾರು ವಿವರ ನೀಡುವುದು) ;

(ಈ) ದೀರ್ಘಕಾಲ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸಿ ನಿವೃತ್ತಿ ಮತ್ತು ಮರಣ ಹೊಂದಿದ ನೌಕರರಿಗೆ ಯಾವುದಾದರೂ ಸಾಮಾಜಿಕ ಮತ್ತು ಆರ್ಥಿಕ ಸವಲತ್ತುಗಳನ್ನು ಸರ್ಕಾರದಿಂದ ಒದಗಿಸಲಾಗಿದೆಯೇ ;

(ಉ) ದಿನಾಂಕ ೨೦೦೬ರ ಏಪ್ರಿಲ್ ೧೦ಕ್ಕೆ, ೧೦ ವರ್ಷ ಪೂರ್ಣಗೊಳಿಸಿ ಖಾಯಂಗೊಂಡ ನೌಕರರ ಸಂಖ್ಯೆ ಎಷ್ಟು (ಇಲಾಖಾವಾರು ಮತ್ತು ನಿಗಮ, ಮಂಡಳಿವಾರು ವಿವರ ನೀಡುವುದು) ;

(ಊ) ಸರ್ವೋನ್ನತ ನ್ಯಾಯಾಲಯ ಆದೇಶ ನೀಡಿದ ನಂತರ (ದಿನಾಂಕ ೨೦೦೬ರ ಏಪ್ರಿಲ್ ೧೦) ಖಾಯಂಗೊಂಡ ನೌಕರರ ಸಂಖ್ಯೆ ಎಷ್ಟು (ಇಲಾಖಾವಾರು ಮತ್ತು ನಿಗಮ, ಮಂಡಳಿವಾರು ವಿವರ ನೀಡುವುದು) ;

(ಋ) ಪ್ರತಿಯೊಂದು ಇಲಾಖೆಯ ಪ್ರಗತಿ ಪರಿಶೀಲನಾ ಮಾಡುವ ಮುಖ್ಯಮಂತ್ರಿಗಳು ತಮ್ಮ ಅಧೀನಕ್ಕೆ ಒಳಪಡುವ ಇಲಾಖೆಯ ವಿಷಯವಾದ "ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ನಿಯಮ-೨೦೧೩" ನ್ನು ಕಳೆದ ೧೬ ತಿಂಗಳಿನಿಂದ ಜಾರಿಗೆ ತರದೇ ಇರುವುದು ಸಮಂಜಸವೇ ;

(ಎ) ಈ ನಿಯಮ-೨೦೧೩ ನ್ನು ಶೀಘ್ರವಾಗಿ ಜಾರಿಗೊಳಿಸಲು ಕ್ರಮ ವಹಿಸಲಾಗುವುದೇ ?

## ೨೦೩೧ ಮಹಾ ಅಭಿಯೋಜನೆ ವಿಚಾರ

**ಶ್ರೀ ಭಾನುಪ್ರಕಾಶ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೪೫೮ (೬೪೯) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೩೧ ಮಹಾ ಅಭಿಯೋಜನೆ ರಾಜ್ಯದಲ್ಲಿನ ಎಷ್ಟು ನಗರಗಳಲ್ಲಿ ಈಗಾಗಲೇ ಜಾರಿಯಲ್ಲಿದೆ (ನಗರಗಳ ಹೆಸರಿನ ಪಟ್ಟಿ ನೀಡುವುದು) ;

(ಆ) ಮಹಾ ಅಭಿಯೋಜನೆ ಕಾರಣ ಜನ ಸಾಮಾನ್ಯರಿಗೆ ಅನೇಕ ರೀತಿ ಸಮಸ್ಯೆಗಳು ಉದ್ಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಮುಂದೆ ಇರುವ ಪರಿಹಾರವೇನು;

(ಇ) ಮಹಾ ಅಭಿಯೋಜನೆಯನ್ನು ಪುನರ್ ಪರಿಶೀಲಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ ಯಾವಾಗ (ವಿವರ ನೀಡುವುದು)?

## ನಗರೋತ್ಥಾನ ಯೋಜನೆ

**ಶ್ರೀ ಭಾನುಪ್ರಕಾಶ್ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೪೫೯ (೬೪೮) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಶಿವಮೊಗ್ಗ ಮಹಾನಗರ ಪಾಲಿಕೆಗೆ ನಗರೋತ್ಥಾನ ಯೋಜನೆ ಅನ್ವಯ ಬಿಡುಗಡೆ ಆದ ಹಣ ಎಷ್ಟು (ವರ್ಷವಾರು ಮಾಹಿತಿ ನೀಡುವುದು) ;

(ಆ) ಮೇಲ್ಕಂಡ ಯೋಜನೆ ಅನ್ವಯ ಬಿಡುಗಡೆ ಆದ ಹಣ ಸೂಕ್ತ ಯೋಜನೆಯನ್ನು ನಿಯಮಾನುಸಾರವಾಗಿ ತಯಾರಿಸಲಾಗಿದೆಯೇ;

(ಇ) ಈಗ ಯೋಜನೆ ಅನ್ವಯ ನಡೆಯುತ್ತಿರುವ ಕಾಮಗಾರಿಗಳಾವುವು; (ಅವುಗಳ ಹಂತಗಳ ವಿವರ ನೀಡುವುದು) ?

## ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಅಕ್ರಮ ಜಾಹೀರಾತು

**ಶ್ರೀ ಎಂ. ಶ್ರೀನಿವಾಸ್ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೪೬೦ (೬೩೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಜಾಹೀರಾತುಗಳನ್ನು ಪ್ರದರ್ಶಿಸಲು ಮತ್ತು ಅವುಗಳಿಗೆ ಅನುಮತಿಸಲು ಸರ್ಕಾರವು ಅನುಸರಿಸುತ್ತಿರುವ ಮಾನದಂಡವೇನು (ಸಂಪೂರ್ಣ ಮಾಹಿತಿ ಒದಗಿಸುವುದು) ;

(ಆ) ಬಿ.ಬಿ.ಎಂ.ಪಿ.ಯ ಜಾಹೀರಾತು ವಿಭಾಗದಲ್ಲಿನ ಸಿಬ್ಬಂದಿ ಮತ್ತು ಅಧಿಕಾರಿಗಳ ಸಂಖ್ಯೆ ಎಷ್ಟು; (ಹುದ್ದೆಗಳ ಸಮೇತ, ಪೂರ್ಣ ವಿವರವನ್ನು ಪ್ರತ್ಯೇಕವಾಗಿ ಒದಗಿಸುವುದು)

(ಇ) ಜಾಹೀರಾತುಗಳು ಮತ್ತು ಫಲಕಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸುವ ಸಂಬಂಧ ಕಳೆದ ೫ ವರ್ಷಗಳ ಅವಧಿಯಲ್ಲಿ ಬಿ.ಬಿ.ಎಂ.ಪಿ.ಯು ನಿಗದಿಪಡಿಸಿಕೊಂಡ ವಾರ್ಷಿಕ ಗುರಿ, ಸಂಗ್ರಹಣೆಯ ಮೂಲ ಮತ್ತು ಇದರಿಂದಾಗಿ ಸಂಗ್ರಹಿಸಲಾದ ತೆರಿಗೆ ಹಣವೆಷ್ಟು; (ವರ್ಷಾವಾರು ಪ್ರತ್ಯೇಕ ಮಾಹಿತಿ ಒದಗಿಸುವುದು)

(ಈ) ಜಾಹೀರಾತು ಮತ್ತು ಫಲಕಗಳ ಪ್ರದರ್ಶನಕ್ಕೆ ನಿಯಮಾವಳಿಗಳು ರಚನೆಯಾದ ಮೇಲೂ ಅಕ್ರಮವಾಗಿ ಜಾಹೀರಾತು ಪ್ರದರ್ಶನವಾಗುತ್ತಿರುವ ಅಂಶವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ, ಇಂತಹ ಎಷ್ಟು ಪ್ರಕರಣಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ; ವಿಧಿಸಲಾದ ದಂಡ ಸಮೇತವಾಗಿ ಪೂರ್ಣ ವಿವರ ಒದಗಿಸುವುದು;

(ಉ) ಕೆಲವು ರಸ್ತೆಗಳಲ್ಲಿ ಅಬ್ಬರದ, ಆಕರ್ಷಣೆಯ ಜಾಹೀರಾತು ಫಲಕ ಪ್ರದರ್ಶನದಿಂದಾಗಿ, ಚಾಲಕರು ರಸ್ತೆಯ ಮೇಲಿನ ಗಮನ ಬೇರೆಡೆ ಹರಿಯುತ್ತಿದ್ದು, ಇದು ಅಪಘಾತಗಳಿಗೆ ಹಾಗೂ ರಸ್ತೆಯಲ್ಲಿ ಸಾರ್ವಜನಿಕರು ಮುಜುಗರಕ್ಕೆ ಒಳಗಾಗುವ ಪ್ರಸಂಗಗಳನ್ನು ತಪ್ಪಿಸಲು ಸರ್ಕಾರ ಯಾವ ಮಾರ್ಗಸೂಚಿಗಳನ್ನು ಅನುಸರಿಸುತ್ತಿದೆ (ವಿವರ ನೀಡುವುದು)?

## ಬೆಂಗಳೂರು ನಗರದಲ್ಲಿ ಅಕ್ರಮ ಖಾಸಗಿ ಬಡಾವಣೆ

**ಶ್ರೀ ಎಂ. ಶ್ರೀನಿವಾಸ್ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೪೬೧ (೫೯೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ೫ ವರ್ಷಗಳ ಅವಧಿಯಲ್ಲಿ ಸಂಬಂಧಿಸಿದ ಪ್ರಾಧಿಕಾರದಿಂದ (ಬಿಡಿಎ ಮತ್ತು ಬಿಎಂಆರ್‌ಡಿಎ) ಅನುಮತಿ ಪಡೆದು ಬೆಂಗಳೂರು ನಗರದಲ್ಲಿ ನಿರ್ಮಾಣವಾಗಿರುವ ಖಾಸಗಿ ಬಡಾವಣೆಗಳು ಎಷ್ಟು; ಯಾವ ಭಾಗಗಳಲ್ಲಿ ನಿವೇಶನಗಳನ್ನು ರಚಿಸಿ ಹಂಚಲಾಗಿದೆ; ಬಡಾವಣೆವಾರು, ನಿವೇಶನಗಳ ಸಂಖ್ಯೆಯನ್ನು ವರ್ಷವಾರು ಪ್ರತ್ಯೇಕ ಸಂಪೂರ್ಣ ಮಾಹಿತಿ ಒದಗಿಸುವುದು ;

(ಆ) ಬಿ.ಡಿ.ಎ. ಮತ್ತು ಸಂಬಂಧಿತ ಪ್ರಾಧಿಕಾರದಿಂದ ಅನುಮತಿ ಪಡೆಯದೆ ಖಾಸಗಿಯವರು ಬೆಂಗಳೂರು ನಗರ ಮತ್ತು ಸುತ್ತಮುತ್ತಲು ಅಕ್ರಮವಾಗಿ ಬಡಾವಣೆಗಳನ್ನು ನಿರ್ಮಾಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಅಕ್ರಮ ಬಡಾವಣೆಗಳೆಂದು ಗುರುತಿಸಿರುವ ಪಟ್ಟಿಯನ್ನು ಒದಗಿಸುವುದು ;

(ಇ) ಅಕ್ರಮ ಬಡಾವಣೆಗಳನ್ನು ನಿರ್ಮಿಸಿ, ನಾಗರೀಕರಿಗೆ ವಂಚಿಸಿರುವ ಪ್ರಕರಣಗಳನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ (ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವುದು) ?

## ಐ.ಎ.ಎಸ್. ಅಧಿಕಾರಿ ವಿರುದ್ಧ ಇಲಾಖಾ ತನಿಖೆ

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :–**

೪೬೨ (೫೯೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

ಮೈಸೂರು ನಗರದ ಚಾಮುಂಡಿ ಬೆಟ್ಟದ ತಪ್ಪಲಿನ ಕುರುಬಾರಹಳ್ಳಿ ಸರ್ವೆ ನಂ.೪ ಮತ್ತು ಆಲನಹಳ್ಳಿ ಸರ್ವೆ ನಂ. ೪೧ರಲ್ಲಿ ನೀಡದಿರುವ ಭೂಹಗರಣಕ್ಕೆ ಸಂಬಂಧಿಸಿದಂತೆ ಆರೋಪಿತ ಅಂದಿನ ಜಿಲ್ಲಾಧಿಕಾರಿ ಶ್ರೀ ಪಿ.ಎಸ್. ವಸ್ತ್ರದ್, ಐ.ಎ.ಎಸ್. ಇವರ ವಿರುದ್ಧ ಇಲಾಖಾ ತನಿಖೆಗೆ ಆದೇಶವಾಗಿದೆಯೇ (ಅವರ ಮೇಲೆ ಹೊರಿಸಲಾಗಿರುವ ಆರೋಪಗಳ ವಿವರ ನೀಡುವುದು) ?

## ಮಹಾನಗರ ಪಾಲಿಕೆ ವ್ಯಾಪ್ತಿಯ ಬೀದಿ ಬದಿ ವ್ಯಾಪಾರಿಗಳು

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :–**

೪೬೩ (೫೯೧) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಬೀದಿ ಬದಿ ವ್ಯಾಪಾರಿಗಳು ಎಷ್ಟು ಜನರಿದ್ದಾರೆ ಎಂಬ ಬಗ್ಗೆ ಸರ್ವೇಕ್ಷಣೆ ನಡೆದಿದೆಯೇ (ಮಹಾನಗರ ಪಾಲಿಕೆಗಳವಾರು ವಿವರ ನೀಡುವುದು) ;

(ಆ) ಇಂತಹ ಬೀದಿ ಬದಿ ವ್ಯಾಪಾರಿಗಳಿಗೆ ಪರವಾನಗಿ ಕೊಡುವ ವಿಚಾರ ಸರ್ಕಾರದ ಮುಂದಿದೆಯೇ (ವಿವರ ನೀಡುವುದು) ?

03362-5

**ಜನರಿಂದ ಸಂಗ್ರಹಿಸಿದ ಚೀಟಿ ಹಣ ಲಪಟಾಯಿಸಿರುವುದು**

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :-**

೪೬೪ (೫೯೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಎರಡು ವರ್ಷಗಳಲ್ಲಿ ಚೀಟಿ ನಡೆಸಿ, ಜನರಿಂದ ಹಣ ಸಂಗ್ರಹಿಸಿ, ಚೀಟಿ ಹಣ ವಾಪಸ್ ನೀಡದೇ ಮೋಸ ಮಾಡಿರುವ ಎಷ್ಟು ಪ್ರಕರಣಗಳು ರಾಜ್ಯಾದ್ಯಂತ ದಾಖಲಾಗಿದೆ; ಇಂತಹ ಮೋಸ ಮಾಡಿದ ವ್ಯಕ್ತಿಗಳು, ಸಂಸ್ಥೆಗಳ ಹೆಸರು, ವಿಳಾಸ ಮತ್ತು ಪ್ರಕರಣಗಳ ವಿವರ ನೀಡುವುದು ;

(ಆ) ಇಂತಹ ಎಷ್ಟು ಪ್ರಕರಣಗಳಲ್ಲಿ ಮೋಸ ಮಾಡಿದ ವ್ಯಕ್ತಿಗಳನ್ನು ಬಂಧಿಸಲಾಗಿದೆ; ಮೊಕದ್ದಮೆ ಹೂಡಲಾಗಿದೆ; ಎಷ್ಟು ಪ್ರಕರಣಗಳಲ್ಲಿ ನೊಂದ ಜನರಿಗೆ ಹಣವನ್ನು ಹಿಂದಿರುಗಿಸಲಾಗಿದೆ ;

(ಇ) ಇಂತಹ ಪ್ರಕರಣಗಳನ್ನು ತಡೆದು, ಅನಧಿಕೃತವಾಗಿ ಚೀಟಿ ವ್ಯವಹಾರಗಳನ್ನು ಹತ್ತಿಕ್ಕಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

**ನಾಪತ್ತೆಯಾದ ಯುವತಿಯರು ಮತ್ತು ಪತ್ತೆ ಹಚ್ಚುವಲ್ಲಿ ಕ್ರಮ**

**ಶ್ರೀ ಎಂ. ಶ್ರೀನಿವಾಸ್ (ವಿಧಾನ ಸಭೆಯಿಂದ ಚುನಾಯಿತರಾದವರು) :-**

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :-**

೪೬೫ (೫೮೯+೫೯೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ೫ ವರ್ಷಗಳ ಅವಧಿಯಲ್ಲಿ ದಾಖಲಾಗಿರುವಂತೆ ರಾಜ್ಯದಲ್ಲಿ ಕಾಣೆಯಾದವರ/ನಾಪತ್ತೆಯಾದವರ ಪ್ರಕರಣಗಳು ಎಷ್ಟು; ಎಷ್ಟು

ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ (ಜಿಲ್ಲಾವಾರು, ವರ್ಷವಾರು ಪ್ರತ್ಯೇಕ ಮಾಹಿತಿ ಒದಗಿಸುವುದು) ;

(ಆ) ಕಾಣೆಯಾಗುತ್ತಿರುವ ಪ್ರಕರಣಗಳಲ್ಲಿ ಹೆಣ್ಣು ಮಕ್ಕಳ ಮತ್ತು ಯುವತಿಯರ ಸಂಖ್ಯೆ ಎಷ್ಟು; (ವರ್ಷವಾರು, ಜಿಲ್ಲಾ ಮಾಹಿತಿ ಒದಗಿಸುವುದು) ಈ ನಾಪತ್ತೆ ಪ್ರಕರಣಗಳಿಗೆ ಯಾವ ಕಾರಣಗಳನ್ನು ಗುರುತಿಸಲಾಗಿದೆ (ಮಾಹಿತಿ ನೀಡುವುದು) ;

(ಇ) ನಾಪತ್ತೆ ಪ್ರಕರಣಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಯುವತಿಯರು ಕಣ್ಮರೆಯಾಗುತ್ತಿರುವ ಪ್ರಕರಣಗಳನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಯಾವ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗಿದೆ (ಮಾಹಿತಿ ಒದಗಿಸುವುದು) ?

## ದಿನಗೂಲಿ ಕ್ಷೇಮಾಭಿವೃದ್ಧಿ ಅಧಿನಿಯಮ ಜಾರಿ

**ಶ್ರೀ ಬಿ. ರಾಮಕೃಷ್ಣ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೪೬೬ (೫೯೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಿನಾಂಕ ೧೦-೪-೨೦೦೬ ರಂದು ೧೦ ವರ್ಷಗಳಿಗಿಂತ ಕಡಿಮೆ ಇರದಂತೆ ಕಾರ್ಯನಿರ್ವಹಿಸಿ ಸೇವೆಯನ್ನು ಪೂರ್ಣಗೊಳಿಸಿದಂಥ ಮತ್ತು ದಿನಾಂಕ ೧೫-೨-೨೦೧೩ ರಂದು ಸರ್ಕಾರದ ಇಲಾಖೆಗಳು ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರತವಾಗಿರುವ ಬಿ, ಸಿ ಮತ್ತು ಡಿ ಗುಂಪು ದಿನಗೂಲಿ ನೌಕರರ ಶ್ರೇಣಿವಾರು ಸಂಖ್ಯೆಯನ್ನು ತಿಳಿಸಲಾಗುವುದೇ (ಇಲಾಖಾವಾರು ಮತ್ತು ಸ್ಥಳೀಯ ಸಂಸ್ಥೆಗಳವಾರು) ;

(ಆ) ಈ ದಿನಗೂಲಿ ನೌಕರರಿಗೆ ಪ್ರಸ್ತುತ ಮಾಸಿಕವಾಗಿ ಪಾವತಿ ಮಾಡಲಾಗುತ್ತಿರುವ ಒಟ್ಟಾರೆ ವೆಚ್ಚವೆಷ್ಟು (ಇಲಾಖಾವಾರು ಮತ್ತು ಸ್ಥಳೀಯ ಸಂಸ್ಥೆಗಳವಾರು) ;

(ಇ) ಕರ್ನಾಟಕ ದಿನಗೂಲಿ ಕ್ಷೇಮಾಭಿವೃದ್ಧಿ ನಿಯಮ-೨೦೧೩ನ್ನು ಜಾರಿಗೊಳಿಸಿದಲ್ಲಿ ಧಾರಣೆ ಮಾಡಿರುವ ಹುದ್ದೆಯ ಕಾಲಿಕ ವೇತನ ಶ್ರೇಣಿಯ ಕನಿಷ್ಠ ಹಂತ ನಿಗದಿಪಡಿಸಿದಲ್ಲಿ ಅದರಿಂದ ಸರ್ಕಾರಕ್ಕೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ತಗಲುವ ಮಾಸಿಕ ವೆಚ್ಚವೆಷ್ಟು (ಇಲಾಖಾವಾರು ಮತ್ತು ಸ್ಥಳೀಯ ಸಂಸ್ಥೆಗಳವಾರು) ;

(ಈ) ಕರ್ನಾಟಕ ದಿನಗೂಲಿ ಕ್ಷೇಮಾಭಿವೃದ್ಧಿ ನಿಯಮ-೨೦೧೩ನ್ನು ಶೀಘ್ರವಾಗಿ ಅನುಷ್ಠಾನಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದೇ ?

## ನದಿಗಳಲ್ಲಿ ಈಜುವಾಗ ಸುಳಿಗೆ ಸಿಲುಕಿ ಮೃತಪಟ್ಟವರು

**ಶ್ರೀ ಬಿ. ರಾಮಕೃಷ್ಣ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೪೬೭ (೫೯೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ವಿವಿಧ ವ್ಯಾಪ್ತಿಯಲ್ಲಿ ಬರುವ ನದಿಗಳಲ್ಲಿ ವಿಹಾರಕ್ಕೆ ತೆರಳುವ ಯುವಕರು ಈಜುವಾಗ ಸುಳಿಗೆ ಸಿಲುಕಿ ಮೃತಪಟ್ಟವರ ಸಂಖ್ಯೆ ಎಷ್ಟು; ಕಳೆದ ೫ ವರ್ಷಗಳ ಮಾಹಿತಿ ನೀಡುವುದು ;

(ಆ) ಇದನ್ನು ತಡೆಗಟ್ಟಲು ಕಳೆದ ಅಧಿವೇಶನದಲ್ಲಿ ಸರ್ಕಾರದ ಗಮನಕ್ಕೆ ತಂದರೂ ಸಹ ಯಾವುದೇ ಕ್ರಮ ಕೈಗೊಳ್ಳದೇ ಇರಲು ಕಾರಣಗಳೇನು (ಪೂರ್ಣ ಮಾಹಿತಿ ನೀಡುವುದು) ?

## ಪೊಲೀಸ್ ಇಲಾಖೆಯಲ್ಲಿನ ವಾಹನಗಳು

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)–**

೪೬೭೮ (೬೩೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪೊಲೀಸ್ ಇಲಾಖೆಯಲ್ಲಿ ಹಾಲಿ ಇರುವ ವಾಹನಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಕೆಲವು ಪೊಲೀಸ್ ಠಾಣೆಗಳಲ್ಲಿ ವಾಹನಗಳಿದ್ದರೂ ಆಗಾಗ್ಗೆ ದುರಸ್ತಿಗೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬರುತ್ತಿದೆಯೇ ;

(ಇ) ಹಾಗಿದ್ದಲ್ಲಿ, ಸದರಿ ಇಲಾಖೆಗೆ ಹೊಸದಾಗಿ ವಾಹನಗಳನ್ನು ಖರೀದಿಸಲು ಅಥವಾ ದುರಸ್ತಿ ಪಡಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು ; ಸರ್ಕಾರ ಇದುವರೆವಿಗೂ ಕೈಗೊಂಡ ಕ್ರಮಗಳೇನು ? (ಪೂರ್ಣ ಮಾಹಿತಿ ನೀಡುವುದು)

## ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ಹಾಗೂ ದೌರ್ಜನ್ಯಗಳು

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವಗು)–**

೪೬೭೯ (೬೩.೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ, ದೌರ್ಜನ್ಯ, ಸರಗಳ್ಳತನ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ ಕಳೆದ ೩ ವರ್ಷಗಳಿಂದ ಇಂತಹ ಎಷ್ಟು ಪ್ರಕರಣಗಳು ಘಟಿಸಿವೆ ಮತ್ತು ದಾಖಲಾಗಿವೆ (ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು) ;

(ಇ) ಇವುಗಳನ್ನು ತಡೆಗಟ್ಟಲು ಸರ್ಕಾರ ಇದುವರೆಗೂ ಕೈಗೊಂಡ ಕ್ರಮವೇನು ?

**ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಹೊಸ ಪೊಲೀಸ್ ಠಾಣೆಗಳ ಸ್ಥಾಪನೆ**

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)–**

೪೭೦ (೬೦೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾದ ಹಳ್ಳಿಗಳು ಮತ್ತು ಬಡಾವಣೆಗಳನ್ನು ಬೆಂಗಳೂರು ಪೊಲೀಸ್ ಕಮಿಷನ್‌ರೇಟ್ ವ್ಯಾಪ್ತಿಗೆ ತರಲು ಕ್ರಮ ತೆಗೆದುಕೊಳ್ಳಲಾಗಿದೆಯೇ ; ತೆಗೆದುಕೊಂಡಿದ್ದಲ್ಲಿ ವಿವರ ಒದಗಿಸುವುದು ;

(ಆ) ಬಿ.ಬಿ.ಎಂ.ಪಿ ಗೆ ಹೊಸದಾಗಿ ಸೇರ್ಪಡೆಯಾದ ಪ್ರದೇಶ/ಹಳ್ಳಿಗಳ/ಬಡಾವಣೆಗಳ ನಿವಾಸಿಗಳು ಇನ್ನೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪೊಲೀಸ್ ಠಾಣೆಗಳಿಗೆ ಹೋಗಬೇಕಾದ ಪರಿಸ್ಥಿತಿ ಇದ್ದು, ಇದರಿಂದ ಸಾರ್ವಜನಿಕರಿಗೆ ತೀರಾ ಅನಾನುಕೂಲ ಆಗಿಲ್ಲವೇ ;

(ಇ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾದ ಪ್ರದೇಶಗಳಲ್ಲಿ ಎಲ್ಲೆಲ್ಲಿ ಹೊಸ ಪೊಲೀಸ್ ಠಾಣೆಗಳನ್ನು ಆರಂಭಿಸಲು ಕ್ರಮ ತೆಗೆದುಕೊಳ್ಳಲಾಗಿದೆ ?

## ಜೀವನಾವಶ್ಯಕಗಳ ಬೆಲೆ ಏರಿಕೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)–**

೪೭೧ (೬೦೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಜನಸಾಮಾನ್ಯರಿಗೆ ದಿನೇ ದಿನೇ ಬೆಲೆ ಏರಿಕೆ ಬಿಸಿ ತಟ್ಟುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಡವರು ಕೂಲಿ ಕಾರ್ಮಿಕರು, ಮಧ್ಯಮ ವರ್ಗದವರು ಬೆಲೆ ಏರಿಕೆಯಿಂದ ಜೀವನ ಸಾಗಿಸಲು ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕನಿಷ್ಠ ಜೀವನಾವಶ್ಯಕಗಳ ಬೆಲೆ ಏರಿಕೆಯನ್ನು ಕೂಡಲೇ ತಡೆಗಟ್ಟಲು ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು ;

(ಈ) ಬೆಲೆ ಏರಿಕೆ ನಿಯಂತ್ರಣ ಮಾಡಲು ಸರ್ಕಾರವು ಅನುಸರಿಸುವ ಸೂತ್ರ, ಮಾನದಂಡವೇನು ;

(ಉ) ಬೆಲೆ ಏರಿಕೆಯಿಂದ ಜನಜೀವನ ಅಸ್ತವ್ಯಸ್ತವಾಗುತ್ತಿರುವುದನ್ನು ಸರಿಪಡಿಸಲು ಸರ್ಕಾರ ನೀಡಬಹುದಾದ ಆದ್ಯತೆಗಳೇನು (ವಿವರ ನೀಡುವುದು) ?

## ಕೆಂಪೇಗೌಡರ ಜಯಂತಿ ಆಚರಣೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)–**

೪೭೨ (೫೪೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಿರ್ಮಾತೃ ಕೆಂಪೇಗೌಡರ ಜಯಂತಿಯನ್ನು ಬಿಬಿಎಂಪಿ ಆಚರಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕೆಂಪೇಗೌಡರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ಸರ್ಕಾರವು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು (ವಿವರ ನೀಡುವುದು) ;

(ಇ) ಬೆಂಗಳೂರನ್ನು ಕಟ್ಟಿ, ವಿಶೇಷ ಕೊಡುಗೆ ನೀಡಿದ ಕೆಂಪೇಗೌಡರ ಮಾಸದ ನೆನಪಿನಲ್ಲಿ ಸರ್ಕಾರವು ಹಾಕಿಕೊಳ್ಳಬಹುದಾದ ಶಾಶ್ವತ ಕಾರ್ಯಕ್ರಮವೇನು (ವಿವರ ನೀಡುವುದು) ;

(ಈ) ಕೆಂಪೇಗೌಡರ ಜಯಂತಿಯನ್ನು ಆಚರಣೆಯೊಂದಿಗೆ ಕೆಂಪೇಗೌಡರ ಅಂದಿನ ಆದರ್ಶ, ತ್ಯಾಗ, ಬಲಿದಾನಗಳ ಅರಿವು ಮೂಡಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ? (ಹಾಗಿದ್ದಲ್ಲಿ ವಿವರ ನೀಡುವುದು)

## ಬೆಂಗಳೂರು ನಗರದ ಕೆರೆಗಳು

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)–**

೪೭೩ (೫೯೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿರುವ ಕೆರೆಗಳ ಒಟ್ಟು ಸಂಖ್ಯೆ ಎಷ್ಟು ; (ವಿವರ ನೀಡುವುದು) ;

(ಆ) ಈಗಾಗಲೇ ಅಭಿವೃದ್ಧಿಪಡಿಸಿರುವ ಕೆರೆಗಳ ಸಂಖ್ಯೆ ಎಷ್ಟು; ಇದಕ್ಕಾಗಿ ವೆಚ್ಚ ಮಾಡಿರುವ ಹಣವೆಷ್ಟು ; ಕಾಮಗಾರಿವಾರು ಕೆರೆ ಅಭಿವೃದ್ಧಿಪಡಿಸಿದ ಗುತ್ತಿಗೆದಾರರ ವಿವರ ನೀಡುವುದು ;

(ಇ) ನಗರದ ಕೆರೆಗಳು ಕಲುಷಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕೆರೆಗಳು ಕಲುಷಿತಗೊಳ್ಳಲು ಕಾರಣವೇನು ;

(ಈ) ಕಾರ್ಖಾನೆ, ಅಪಾರ್ಟ್‌ಮೆಂಟ್‌ಗಳ ತ್ಯಾಜ್ಯದಿಂದ ಕೆರೆ ಕಲುಷಿತಗೊಳ್ಳುತ್ತಿರುವುದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ;

(ಉ) ಅಭಿವೃದ್ಧಿಪಡಿಸಿದ ಕೆರೆಗಳಿಂದ ಜಲಸಂವರ್ಧನೆಯಾಗಿದೆಯೇ (ಹಾಗಿದ್ದರೆ, ಇದರ ಬಳಕೆಯ ವಿವರ ನೀಡುವುದು) ?

## ಜಾನುವಾರುಗಳಿಗೆ ತುರ್ತು ಚಿಕಿತ್ಸಾ ಸೌಲಭ್ಯಗಳು

**ಡಾ: ಮತ್ತಿಕಟ್ಟಿ ವೀರಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೪೭೪ (೬೦೩) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಜಾನುವಾರುಗಳಿಗೆ ಸೂಕ್ತ ತುರ್ತು ಚಿಕಿತ್ಸಾ ಸೌಲಭ್ಯಗಳು ದೊರೆಯದೆ ರೈತರು ತೊಂದರೆಗಳನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ದಿಸೆಯಲ್ಲಿ ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು ;

(ಇ) ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿನ ಜಾನುವಾರುಗಳಿಗೆ ತುರ್ತು ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಲಾಗುವುದೇ ?

## ಘನತ್ಯಾಜ್ಯ ವಿಲೇವಾರಿಯಿಂದ ಪರಿಸರ ಮಾಲಿನ್ಯ

**ಡಾ: ಮತ್ತಿಕಟ್ಟಿ ವೀರಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೪೭೫ (೬೦೨) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಘನತ್ಯಾಜ್ಯ ವಿಲೇವಾರಿ ಸಮಸ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದು ಪರಿಸರ ಮಾಲಿನ್ಯದಿಂದಾಗಿ ರೋಗ ರುಜಿನಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಬೆಂಗಳೂರು ಮಹಾನಗರದಲ್ಲಿನ ದಿನನಿತ್ಯ ಘನತ್ಯಾಜ್ಯವನ್ನು ವಿಲೇವಾರಿ ಮಾಡಲು ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು ;

(ಇ) ಘನ ತ್ಯಾಜ್ಯದಿಂದ ಇಂಧನ ಮತ್ತು ಗೊಬ್ಬರ ತಯಾರಿಕೆಯನ್ನು ಹಾಗೂ ಪ್ಲಾಸ್ಟಿಕ್ ಬಳಸಿದ ರಸ್ತೆಗಳ ನಿರ್ಮಾಣವನ್ನು ಉತ್ತೇಜಿಸಲಾಗುವುದೇ ?

## ವಿವಿಧ ಇಲಾಖೆಗಳಲ್ಲಿ ಖಾಲಿ ಹುದ್ದೆಗಳ ಭರ್ತಿ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) –**

೪೭೬ (೬೦೫) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಸನ ಜಿಲ್ಲೆಯ ಸರ್ಕಾರಿ ಇಲಾಖೆಗಳಲ್ಲಿ ಮಂಜೂರಾದ ಇಲಾಖಾವಾರು ಹುದ್ದೆಗಳೆಷ್ಟು ;

(ಆ) ಜಿಲ್ಲೆಯ ವಿವಿಧ ಇಲಾಖೆಗಳಲ್ಲಿ ಹಾಲಿ ಇರುವ ಹುದ್ದೆಗಳೆಷ್ಟು ;

(ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ ;

(ಈ) ಜಿಲ್ಲೆಯ ಪ್ರಮುಖ ಇಲಾಖೆಗಳಾದ ಆರೋಗ್ಯ, ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಇಲಾಖೆ ಹಾಗೂ ಪಶುಸಂಗೋಪನಾ ಇಲಾಖೆಯಲ್ಲಿ ಸಿಬ್ಬಂದಿ ಕೊರತೆಯಿಂದ ಅಭಿವೃದ್ಧಿ ಕುಂಠಿತವಾಗಿರುವುದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಸಾರ್ವಜನಿಕ ಕುಡಿಯುವ ನೀರು ಸರಬರಾಜು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೪೭೭ (೬೦೪) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಸನ ಜಿಲ್ಲೆಯಲ್ಲಿರುವ ಸಾರ್ವಜನಿಕ ಕುಡಿಯುವ ನೀರಿನ ಟ್ಯಾಂಕುಗಳು ಎಷ್ಟು ;

(ಆ) ಈ ಕುಡಿಯುವ ನೀರಿನ ಟ್ಯಾಂಕುಗಳ ಪೈಕಿ ೧೦ ವರ್ಷಕ್ಕಿಂತ ಹಳೆಯದಾಗಿರುವ ಟ್ಯಾಂಕುಗಳೆಷ್ಟು ಮತ್ತು ಶಿಥಿಲಗೊಂಡಿರುವ ಟ್ಯಾಂಕುಗಳೆಷ್ಟು ;

(ಇ) ಶಿಥಿಲಗೊಂಡಿರುವ ಟ್ಯಾಂಕುಗಳನ್ನು ತೆರವುಗೊಳಿಸಿ ಹೊಸ ಟ್ಯಾಂಕುಗಳನ್ನು ನಿರ್ಮಿಸಲು ಕೈಗೊಂಡಿರುವ ಕ್ರಮಗಳೇನು ?

## ಮಹಿಳೆಯರ ಮೇಲಿನ ದೌರ್ಜನ್ಯ

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೪೭೮ (೬೦೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾಂ ಜಿಲ್ಲೆಯಲ್ಲಿ ಕಳೆದ ೨ ವರ್ಷಗಳಲ್ಲಿ ದಾಖಲಾಗಿರುವ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಈ ಪೈಕಿ ಎಷ್ಟು ಪ್ರಕರಣಗಳು ಇತ್ಯರ್ಥವಾಗಿದೆ; ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು; ಈ ಪ್ರಕರಣಗಳು ಯಾವ ಹಂತದಲ್ಲಿವೆ ;

(ಇ) ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಹೊಸದಾಗಿ ಕಾನೂನನ್ನು ಜಾರಿಗೆ ತರಲು ನಿರ್ಧರಿಸಲಾಗಿದೆಯೇ (ವಿವರ ನೀಡುವುದು) ?

## ನೀರು ಸರಬರಾಜು ಯೋಜನೆ

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) –**

೪೭೯ (೬೦೭) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾಂ ಜಿಲ್ಲೆಯ ನಗರ, ಪಟ್ಟಣಗಳಲ್ಲಿ ನೀರು ಪೂರೈಸುವ ಯೋಜನೆಗೆ ಕೇಂದ್ರ ಸರ್ಕಾರದಿಂದ ಎಷ್ಟು ಕೋಟಿ ಅನುದಾನ ಮಂಜೂರಾಗಿದೆ; ಈ ಅನುದಾನದಲ್ಲಿ ಎಷ್ಟು ಕುಡಿಯುವ ನೀರಿನ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ ;

(ಆ) ಪ್ರಥಮ ಹಂತದಲ್ಲಿ ಯಾವ ನಗರ, ಪಟ್ಟಣಗಳಲ್ಲಿ ಈ ಯೋಜನೆಯನ್ನು ಹಮ್ಮಿಕೊಳ್ಳಲಾಗುವುದು ;

(ಇ) ಅನಧಿಕೃತವಾಗಿ ಖಾಸಗಿ ವ್ಯಕ್ತಿಗಳು ನೀರು ಪೂರೈಕೆ ಚಟುವಟಿಕೆಯಲ್ಲಿ ತೊಡಗಿದ್ದು, ಇದನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡ ಕ್ರಮವೇನು ;

(ಈ) ನೀರು ಪೂರೈಕೆ ಮತ್ತು ಮೇಲುಸ್ತುವಾರಿಗಾಗಿ ಹಾಲಿ ಇರುವ ಸರ್ಕಾರಿ ಸಂಸ್ಥೆಗಳನ್ನು ಒಗ್ಗೂಡಿಸಿ ಏಕ ಮಂಡಳಿಯನ್ನು ರಚಿಸುವ ಯೋಜನೆ ಸರ್ಕಾರಕ್ಕಿದೆಯೇ ?

## ಬಿಜಾಪುರ, ಬೆಳಗಾಂ ಮತ್ತು ಬಾಗಲಕೋಟೆಯಲ್ಲಿನ ನಗರಾಭಿವೃದ್ಧಿ ವಿಷಯಗಳು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೪೮೮ (೬೦೮) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಿಜಾಪುರ ಮಹಾನಗರ ಪಾಲಿಕೆಗೆ (ಮುಂಚೆ ನಗರ ಪಾಲಿಕೆ) ಒಳಚರಂಡಿ ಹಾಗೂ ನೀರು ಸರಬರಾಜು ಯೋಜನೆಗೆ ಕಳೆದ ೨ ವರ್ಷಗಳಲ್ಲಿ ನೀಡಲಾದ ಹಣವೆಷ್ಟು ;

(ಆ) ಅದರಲ್ಲಿ ಯಾವ ಯಾವ ಕಾಮಗಾರಿಗಳನ್ನು ಯಾವ ಯಾವ ವಾರ್ಡಿನಲ್ಲಿ ಯಾವ ಗುತ್ತಿಗೆದಾರರ ಮೂಲಕ ಕೈಗೊಳ್ಳಲಾಗಿದೆ ;

(ಇ) ಒಟ್ಟು ಕಾಮಗಾರಿಯ ಪ್ರಗತಿಯೇನು; ಯಾವಾಗ ಮುಕ್ತಾಯಗೊಳ್ಳುವುದು ;

(ಈ) ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳ ಅಭಿವೃದ್ಧಿ ಪ್ರಾಧಿಕಾರದಲ್ಲಿ ಕಳೆದ ೫ ವರ್ಷಗಳಲ್ಲಿ ನಿರ್ಮಿಸಿರುವ ಖಾಸಗಿ ಲೇಔಟ್‌ಗಳ ಹೆಸರು, ವಿಸ್ತೀರ್ಣ, ಸೈಟುಗಳ ವಿವರ, ಸಿ.ಎ. ಸೈಟ್‌ಗಳ ವಿವರ ನೀಡುವುದು ;

(ಉ) ನಿರ್ಮಾಣಗೊಂಡಿರುವ ಒಟ್ಟು ಸಿ.ಎ. ಸೈಟ್‌ಗಳಲ್ಲಿ ಹಂಚಿಕೆಯಾದ ಸಿ.ಎ. ಸೈಟ್‌ಗಳು ಯಾವ ಬೆಲೆಗೆ ಮತ್ತು ಯಾವ ಉದ್ದೇಶಕ್ಕಾಗಿ ಹಂಚಿಕೆ ಮಾಡಲಾಗಿದೆ ;

(ಊ) ಹಂಚಿಕೆಯಾಗದೇ ಇರುವ ಸಿ.ಎ. ಸೈಟುಗಳು ಯಾವುವು (ಲೇಔಟ್‌ವಾರು ವಿವರ ನೀಡುವುದು) ;

(ಋ) ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ೨೦೦೮ರಿಂದ ಇಲ್ಲಿಯವರೆಗೂ ನಿರ್ಮಿಸಿರುವ ಲೇಔಟ್‌ಗಳೆಷ್ಟು; ಅದರಲ್ಲಿ ಯಾವ ಯಾವ ಅಳತೆಯ ಸೈಟುಗಳನ್ನು ನಿರ್ಮಿಸಲಾಗಿದೆ ;

(ಎ) ಇದರಲ್ಲಿ ಹಂಚಿಕೆಯಾದ ಸೈಟು ಯಾವ ವಿಧಾನದ ಮೂಲಕ ಯಾರಿಗೆ ಎಷ್ಟು ಬೆಲೆಗೆ ನೀಡಲಾಗಿದೆ ; (ಕೋಟಾವಾರು ವಿವರ ನೀಡುವುದು)

(ಏ) ಖಾಲಿಯಿರುವ ನಿವೇಶನಗಳು ಯಾವುವು ಹಾಗೂ ಅವುಗಳ ಹಂಚಿಕೆಯನ್ನು ಯಾವಾಗ ಮಾಡಲಾಗುತ್ತದೆ ;

(ಐ) ಈ ಹಂಚಿಕೆಯಾದ ಸೈಟುಗಳಲ್ಲಿ ಶಿಕ್ಷಕರಿಗೆ ದೊರೆತ ನಿವೇಶನಗಳೆಷ್ಟು ?

## ಅಕ್ರಮ ಮರಳುಗಾರಿಕೆ ತಡೆಗಟ್ಟುವುದು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :-**

೪೮೧ (೬೧೦) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :-

ರಾಜ್ಯದಲ್ಲಿ ಅಕ್ರಮ ಮರಳುಗಾರಿಕೆ ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

## ಬೆಂಗಳೂರಿನ ಟ್ರಾಫಿಕ್ ಸಮಸ್ಯೆ ನಿರ್ವಹಣೆ

**ಶ್ರೀ ಜಗ್ಗೇಶ್ (ನಾಮನಿರ್ದೇಶನ ಹೊಂದಿದವರು) :-**

೪೮೨ (೬೧೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಮಹಾನಗರದಲ್ಲಿ ಬೆಳಿಗ್ಗೆ ೮.೩೦.ರ ಸಮಯದಿಂದ ೧೧.೩೦ರ ಸಮಯದ ನಡುವೆ ಹಾಗೂ ಸಂಜೆ ೪.೩೦ ರಿಂದ ರಾತ್ರಿ ೮.೩೦ರ ನಡುವಿನ ಸಮಯಗಳಲ್ಲಿ ಟ್ರಾಫಿಕ್ ಸಮಸ್ಯೆ ಹತೋಟಿ ತಪ್ಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಅಗತ್ಯ ತುರ್ತು ಸೇವೆಗಳಿಗೆ ತೊಂದರೆಯಾಗುವುದರ ಜೊತೆಗೆ ಗಂಟೆಗಟ್ಟಲೆ ಸಮಯ ರಸ್ತೆಯಲ್ಲೇ ಕಳೆಯುತ್ತಿರುವ ಟ್ರಾಫಿಕ್ ಸಮಸ್ಯೆ ನಿಯಂತ್ರಿಸುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ವೈಜ್ಞಾನಿಕವಾಗಿ ಈ ಟ್ರಾಫಿಕ್ ಒತ್ತಡದ ಸಮಸ್ಯೆ ಪರಿಹರಿಸುವ ದಿಕ್ಕಿನಲ್ಲಿ ಸರ್ಕಾರದ ನಿಲುವುಗಳೇನು ?

## ಬೆಂಗಳೂರು ನಗರದಲ್ಲಿ ಅಪರಾಧ ಪ್ರಕರಣಗಳು ಮತ್ತು ನಿಯಂತ್ರಣ

**ಶ್ರೀ ಜಗ್ಗೇಶ್ (ನಾಮನಿರ್ದೇಶನ ಹೊಂದಿದವರು) :-**

೪೮೩ (೬೧೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಮಹಾನಗರದಲ್ಲಿ ದರೋಡೆ, ಅಪಹರಣ ಒಬ್ಬಂಟಿಗರ ಹತ್ಯೆ ದಿನನಿತ್ಯ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಲೇ ಇದೆ. ಈ

ಸಮಸ್ಯೆಗಳಿಗೆ ಕಡಿವಾಣ ಹಾಕಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ; ನಿರ್ವಹಣೆ ಹೇಗೆ ಸಾಗಿದೆ ;

(ಆ) ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ಸಿ.ಸಿ.ಟಿ.ವಿ ಅಳವಡಿಸಿದರೆ ಅಪರಾಧಿಗಳ ಪತ್ತೆ ಹಚ್ಚಲು ಉಪಯುಕ್ತವಲ್ಲವೇ ; ಈ ವಿಚಾರವಾಗಿ ಸರ್ಕಾರದ ನಿಲುವುಗಳೇನು ?

## ಮೆಟ್ರೋ ಸೇತುವೆಯಡಿ ಕಸದ ರಾಶಿ

**ಶ್ರೀ ಜಗ್ಗೇಶ್ (ನಾಮನಿರ್ದೇಶನ ಹೊಂದಿದವರು) :-**

೪೮೪ (೬೧೪) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಮೆಟ್ರೋ ಕಾಮಗಾರಿಗಳು ಮುಗಿದಿರುವ ಕಡೆ ಈಗಾಗಲೇ ಮೆಟ್ರೋ ರೈಲು ಸಂಚಾರ ಆರಂಭವಾಗಿರುವ ಮೆಟ್ರೋ ಸೇತುವೆ ಕೆಳಗಡೆ ಅಳಿದುಳಿದಿರುವ ಕಸದ ರಾಶಿ ಹಾಗೇ ಉಳಿದು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಕಸದ ರಾಶಿ ಜೊತೆಗೆ, ಕಟ್ಟಡದ ಅವಶೇಷಗಳನ್ನು ತಂದು ಸುರಿಯುತ್ತಿರುವ ಈ ಕಸದ ರಾಶಿಗೆ ಮುಕ್ತಿ ಎಂದು; ಇದರ ನಿರ್ವಹಣೆ ಯಾರು, ಹೇಗೆ ನಿರ್ವಹಿಸುತ್ತಾರೆ ?

## ಬೆಂಗಳೂರು ನಗರದಲ್ಲಿ ಕೆರೆಗಳ ಅತಿಕ್ರಮಣ

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) –**

೪೮೫ (೬೧೮) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದಲ್ಲಿರುವ ಕೆರೆಗಳು ಎಷ್ಟು; ಅವುಗಳ ವಿಸ್ತೀರ್ಣದ ಬಗ್ಗೆ ಪ್ರದೇಶವಾರು ಪ್ರತ್ಯೇಕ ಮಾಹಿತಿ ಒದಗಿಸುವುದು ;

(ಆ) ಈ ಕೆರೆಗಳ ದಂಡೆ ಮತ್ತು ಆಸುಪಾಸಿನ ಪ್ರದೇಶಗಳಲ್ಲಿ ನಿರ್ಮಾಣಗೊಂಡ ವಸತಿ ಸಮುಚ್ಚಯ ಸೇರಿದಂತೆ ಇತರೆ ಕಟ್ಟಡಗಳ ಸಂಖ್ಯೆ ಎಷ್ಟು (ಸಂಪೂರ್ಣ ಮಾಹಿತಿ ಒದಗಿಸುವುದು) ;

(ಇ) ಈ ಕೆರೆಗಳನ್ನು ಅಕ್ರಮವಾಗಿ ಅತಿಕ್ರಮಿಸಿದ ವ್ಯಕ್ತಿ, ಕಟ್ಟಡ ನಿರ್ಮಾಣ ಸಂಸ್ಥೆಗಳು ಯಾವುವು ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಈ) ಅತಿಕ್ರಮಣಗೊಂಡ ಕೆರೆಗಳ ಅಂದಾಜು ವಿಸ್ತೀರ್ಣ ಎಷ್ಟು; ಹಾಗೂ ಇವುಗಳನ್ನು ತೆರವುಗೊಳಿಸಲು ಕೈಗೊಂಡ ಕ್ರಮಗಳು ಏನು (ಸಂಪೂರ್ಣ ಮಾಹಿತಿ ಒದಗಿಸುವುದು) ?

## ಎನ್.ಜಿ.ಓ., ಗಳಿಗೆ ದೇಣಿಗೆ ಮತ್ತು ಸಮರ್ಪಕ ಬಳಕೆ

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) –**

೪೮೬ (೬೧೯) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವಯಂಸೇವಾ ಸಂಸ್ಥೆಗಳು ಎಷ್ಟು ; ಕಾರ್ಯನಿರ್ವಹಣೆಯ ಕ್ಷೇತ್ರಾವಾರು ಅವುಗಳ ಪ್ರತ್ಯೇಕ ಮಾಹಿತಿ ಒದಗಿಸುವುದು ;

(ಆ) ಕಳೆದ ೫ ವರ್ಷಗಳ ಅವಧಿಯಲ್ಲಿ ಈ ಎನ್.ಜಿ.ಓ., ಗಳಿಗೆ ಬಂದಿರುವ ವಿದೇಶಿ ದೇಣಿಗೆ ಮತ್ತು ಕೇಂದ್ರ ರಾಜ್ಯ ಸರ್ಕಾರಗಳ ಅನುದಾನ ಕುರಿತ ಸಂಪೂರ್ಣ ಮಾಹಿತಿ ಒದಗಿಸುವುದು ;

(ಇ) ಎನ್.ಜಿ.ಓ.,ಗಳ ಕಾರ್ಯನಿರ್ವಹಣೆ ಮತ್ತು ದೊರಕಿದ ಅನುದಾನದ ಸದ್ಬಳಕೆ ಕುರಿತಾಗಿ ಸರ್ಕಾರವು ಗಮನಿಸುತ್ತಿದೆಯೇ ; ಹಾಗಿದ್ದಲ್ಲಿ ಅನುದಾನ ದುರ್ಬಳಕೆಯ ಪ್ರಕರಣಗಳ ಬಗ್ಗೆ ಮಾಹಿತಿ ಒದಗಿಸುವುದು ;

(ಈ) ಅನುದಾನ ದುರ್ಬಳಕೆ ಮಾಡಿಕೊಂಡ ಎನ್.ಜಿ.ಓ., ಗಳು ಯಾವುವು (ಇವುಗಳ ವಿರುದ್ಧ ಕೈಗೊಂಡ ಕ್ರಮಗಳ ಬಗ್ಗೆ ಪೂರ್ಣ ಮಾಹಿತಿ ಒದಗಿಸುವುದು) ?

## ಕೆರೆಗಳಿಗೆ ಮಲೀನ ನೀರು ಸೇರ್ಪಡೆ

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) –**

೪೮೭ (೬೧೭) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿನ ಯಾವ ಕೆರೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ತ್ಯಾಜ್ಯ, ಮಲೀನ ನೀರು ಸೇರಿದಂತೆ ಇತರ ಕಲ್ಮಶಗಳು ಸೇರ್ಪಡೆಯಾಗುತ್ತಿವೆ (ಅವುಗಳ ಸಂಪೂರ್ಣ ವಿವರ ಒದಗಿಸುವುದು) ;

(ಆ) ಈ ತ್ಯಾಜ್ಯ ಸೇರ್ಪಡೆಗೆ ಕಾರಣವಾಗುತ್ತಿರುವ ಅಂಶಗಳು ಯಾವುವು (ಸಂಪೂರ್ಣ ಮಾಹಿತಿ ಒದಗಿಸುವುದು) ;

(ಇ) ಇಂತಹ ಪ್ರಕರಣಗಳನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ, ಕೆರೆಗಳನ್ನು ಸಂರಕ್ಷಿಸಲು ಯಾವ ತುರ್ತು ಕ್ರಮಗಳನ್ನು ಸರ್ಕಾರ ಆಲೋಚಿಸಿದೆ (ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳ ಮಾಹಿತಿಯನ್ನು ಒದಗಿಸುವುದು) ?

## ಬೆಂಗಳೂರು ನಗರದಲ್ಲಿ ರಾಜಾ ಕಾಲುವೆ ಒತ್ತುವರಿ

**ಶ್ರೀ ಕೆ. ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು)** :–

೪೮೮ (೬೧೬) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿರುವ ರಾಜಾ ಕಾಲುವೆ ವಿಸ್ತೀರ್ಣ ಎಷ್ಟು; ಇವುಗಳಲ್ಲಿ ಪ್ರಸ್ತುತ ಒತ್ತುವರಿ ಆಗಿರುವುದೆಂದು ಗುರುತಿಸಲಾಗಿರುವ ಪ್ರಮಾಣ ಎಷ್ಟು ;

(ಆ) ರಾಜಾ ಕಾಲುವೆಗಳನ್ನು ಒತ್ತುವರಿ ಮಾಡಿರುವ ವ್ಯಕ್ತಿ, ಸಂಸ್ಥೆಗಳ ಮಾಹಿತಿ ಸರ್ಕಾರಕ್ಕೆ ಇದೆಯೆ; ಹಾಗಿದ್ದಲ್ಲಿ, ಪ್ರತ್ಯೇಕ ಮಾಹಿತಿ ಒದಗಿಸುವುದು ;

(ಇ) ರಾಜಾ ಕಾಲುವೆ ಒತ್ತುವರಿ ತೆರವು ಕಾರ್ಯವು ವಿಳಂಬಗತಿಯಲ್ಲಿ ಸಾಗುತ್ತಿರುವ ಅಂಶವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೆ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವುದು ;

(ಈ) ರಾಜಾ ಕಾಲುವೆಗಳಲ್ಲಿ ತುಂಬಿರುವ ಹೂಳು ತೆರವುಗೊಳಿಸುವಲ್ಲಿನ ವೈಫಲ್ಯವು ಮಳೆಗಾಲ ಪ್ರಾರಂಭವಾಗುತ್ತಿರುವ ಈ ದಿನಗಳಲ್ಲಿ

ಉಂಟುಮಾಡಬಹುದಾದ ಅನಾಹುತದ ಅಂದಾಜು ಸರ್ಕಾರಕ್ಕೆ ಇದೆಯೇ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಕೈಗೊಂಡ ಮುಂಜಾಗ್ರತೆ ಕ್ರಮಗಳು ಏನು (ಸಂಪೂರ್ಣ ಮಾಹಿತಿ ಒದಗಿಸುವುದು) ?

## ಎ.ಡಿ.ಬಿ. ಯೋಜನೆ ಅಡಿ ವಿವಿಧ ಕಾಮಗಾರಿ ಅನುಷ್ಠಾನ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೪೮೯ (೬.೬.೩) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅತ್ಯಂತ ವೇಗದಲ್ಲಿ ಬೆಳವಣಿಗೆ ಕಾಣುತ್ತಿರುವ ಹೊಸಪೇಟೆ ನಗರದಲ್ಲಿ ಎ.ಡಿ.ಬಿ. ಯೋಜನೆ ಅಡಿಯಲ್ಲಿ ಕುಡಿಯುವ ನೀರು, ಒಳ ಚರಂಡಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ (ಯೋಜನೆಯ ಸಂಪೂರ್ಣ ವಿವರ ವಾರ್ಡ್‌ವಾರು ನೀಡುವುದು) ;

(ಆ) ಸದರಿ ಯೋಜನೆ ಪೂರ್ಣಗೊಳಿಸಲು ವಿಧಿಸಿದ ಕಾಲಮಿತಿ ಎಷ್ಟು; ಈ ಯೋಜನೆ ಅಡಿಯಲ್ಲಿ ಇದುವರೆಗೆ ಆಗಿರುವ ಕಾಮಗಾರಿ ವಿವರ ವಾರ್ಡ್‌ವಾರು ನೀಡುವುದು ;

(ಇ) ಈ ಯೋಜನೆ ಅನುಷ್ಠಾನದಲ್ಲಿ ಆಗುತ್ತಿರುವ ವಿಳಂಬದಿಂದ ಜನರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಅದನ್ನು ಸರಿಪಡಿಸಿ ಜನರಿಗೆ ಅನುಕೂಲ ಮಾಡಿಕೊಡಲು ಸರ್ಕಾರದ ಮುಂದಿರುವ ಕ್ರಮಗಳೇನು ?

## "ಬಿ ನಗರ" ಘೋಷಣೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೪೯೦ (೬೬೪) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಮಹಾನಗರ ಪಾಲಿಕೆ ಹೊಂದಿರುವ ಪ್ರಮುಖ ನಗರಗಳಲ್ಲಿ ಯಾವ ನಗರಗಳನ್ನು "ಬಿ ನಗರ" ವೆಂದು ಘೋಷಣೆ ಮಾಡಲಾಗಿದೆ; "ಬಿ ನಗರ" ವೆಂದು ಘೋಷಣೆ ಮಾಡಲು ಮಾನದಂಡಗಳೇನು; ಈ ಘೋಷಣೆಯಿಂದ "ಬಿ ನಗರ"ಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸರ್ಕಾರಿ ನೌಕರರಿಗೆ ಸಿಗುವ ಸೌಲಭ್ಯಗಳೇನು;

(ಆ) ಪ್ರಮುಖ ಮಹಾನಗರ ಪಾಲಿಕೆ ಹೊಂದಿರುವ ನಗರಗಳಾದ "ಗುಲಬರ್ಗಾ", "ಬಳ್ಳಾರಿ" ಗಳನ್ನು ೨೦೧೧ರ ಜನ ಗಣತಿ ಪ್ರಕಾರ ೫ ಲಕ್ಷಕ್ಕಿಂತ ಮೀರಿದ್ದರೂ "ಬಿ ನಗರ" ಗಳಾಗಿ ಘೋಷಣೆ ಮಾಡದಿರಲು ಕಾರಣಗಳೇನು;

(ಇ) ಸರ್ಕಾರ "ಗುಲಬರ್ಗಾ", "ಬಳ್ಳಾರಿ" ಮಹಾನಗರಗಳನ್ನು ತಕ್ಷಣ "ಬಿ ನಗರ" ಗಳನ್ನಾಗಿ ಘೋಷಣೆ ಮಾಡಿ ನ್ಯಾಯಯುತ ಬೇಡಿಕೆಯನ್ನು ಮನ್ನಿಸಿ ಕ್ರಮ ಕೈಗೊಳ್ಳಲು ಮುಂದಾಗುವುದೇ ?

## ಎಚ್.ಕೆ.ಆರ್.ಡಿ.ಬಿ.ಗೆ ಸರ್ಕಾರದ ಅನುದಾನ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೪೯೧ (೬೬೫) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೩-೧೪ನೇ ಸಾಲಿನಿಂದ ಎಚ್.ಕೆ.ಆರ್.ಡಿ.ಬಿ (HKRDB) ಅಸ್ತಿತ್ವಕ್ಕೆ ಬಂದ ನಂತರ ಕೇಂದ್ರ ಸರ್ಕಾರದಿಂದ ಒದಗಿಸಿರುವ ಅನುದಾನ ಎಷ್ಟು ;

(ಆ) ವಿಶೇಷ ಯೋಜನೆ ಅಡಿಯಲ್ಲಿ ೧೪ನೇ ಹಣಕಾಸು ಆಯೋಗಕ್ಕೆ ಹೈ.ಕ. ಪ್ರದೇಶದ ಅಭಿವೃದ್ಧಿಗಾಗಿ ರೂ.೧೫,೦೦೦ ಸಾವಿರ ಕೋಟಿ ಅನುಬಾನ ಕೋರಲಾಗಿದೆಯೇ ; (ಸಂಪೂರ್ಣ ಜಿಲ್ಲಾವಾರು, ಯೋಜನೆವಾರು ವಿವರ ನೀಡುವುದು)

(ಇ) ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರದಿಂದ ನಿಗಧಿಪಡಿಸಿದ ತನ್ನ ಪಾಲಿನ ಅನುದಾನ ಎಷ್ಟು (ಯೋಜನೆವಾರು ಜಿಲ್ಲಾವಾರು ವಿವರ ನೀಡುವುದು) ?

## ಹೈದ್ರಾಬಾದ್ ಕರ್ನಾಟಕ ಭಾಗದ ಸರ್ಕಾರಿ ಇಲಾಖೆಗಳಲ್ಲಿನ ಹುದ್ದೆಗಳು

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೪೯೨ (೬೬೨) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹೈದ್ರಾಬಾದ್ ಕರ್ನಾಟಕ ಭಾಗದ ಸರ್ಕಾರಿ ಇಲಾಖೆಗಳಲ್ಲಿನ ಒಟ್ಟು ಮಂಜೂರಾದ ಪ್ರಸ್ತುತ ಕೆಲಸ ನಿರ್ವಹಿಸುತ್ತಿರುವ ಮತ್ತು

ಸದ್ಯ ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು; (ಗ್ರೂಪ್ ಎ.ಬಿ.ಸಿ. ಡಿ ಹುದ್ದೆವಾರು ಹಾಗೂ ಇಲಾಖಾವಾರು ವಿವರ ನೀಡುವುದು)

(ಆ) ಶಿಕ್ಷಣ ಇಲಾಖೆಯ ಪ್ರಥಮ ದರ್ಜೆ ಕಾಲೇಜುಗಳ, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸರ್ಕಾರಿ, ಖಾಸಗಿ ಮತ್ತು ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಹಾಗೂ ಖಾಲಿಯಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳೆಷ್ಟು; (ಹುದ್ದೆವಾರು ವಿವರ ನೀಡುವುದು) ;

(ಇ) ವೃತ್ತಿಪರ ಶಿಕ್ಷಣ ಕೋರ್ಸ್‌ಗಳಾದ ವೈದ್ಯಕೀಯ, ಇಂಜಿನಿಯರಿಂಗ್, ಕೈಗಾರಿಕಾ ತರಬೇತಿ ಕೇಂದ್ರ ಮುಂತಾದವುಗಳ ಸರ್ಕಾರಿ, ಖಾಸಗಿ ಮತ್ತು ಖಾಸಗಿ ಅನುದಾನಿತ ಶಾಲಾ– ಕಾಲೇಜುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಹಾಗೂ ಖಾಲಿಯಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳೆಷ್ಟು; (ಹುದ್ದೆವಾರು ವಿವರ ನೀಡುವುದು);

(ಈ) ಈ ನೇಮಕಾತಿಯ ಪ್ರಕ್ರಿಯೆ ಸಂವಿಧಾನದ ಕಲಂ ೩೭೧(ಜೆ) ಪ್ರಕಾರ ಮೀಸಲಾತಿ ನೀಡಲಾಗಿದೆಯೇ; ಹಾಗೂ ಖಾಲಿಯಿರುವ ಹುದ್ದೆಗಳ ಇಲಾಖಾವಾರು (ಬೋಧಕ ಹಾಗೂ ಬೋಧಕೇತರ) ಹುದ್ದೆಗಳ ಭರ್ತಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ (ವಿವರ ನೀಡುವುದು) ?

## ಒಳಚರಂಡಿ ಯೋಜನೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೪೯೩ (೬೨೦) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಳ್ಳಾರಿ ಮಹಾನಗರದ ಒಳಚರಂಡಿ (ಯುಜಿಡಿ) ಯೋಜನೆಗೆ ಮಹಾನಗರ ಪಾಲಿಕೆ ಅಸ್ತಿತ್ವದಲ್ಲಿ ಬಂದಾಗಿನಿಂದ ಇತ್ತೀಚಿನವರೆಗೆ ತಯಾರಿಸಿದ ಕ್ರಿಯಾ ಯೋಜನೆಗಳ ವಿವರ ನೀಡುವುದು; ಯಾವ ಯಾವ ಸಾಲಿನಲ್ಲಿ ಎಷ್ಟು ಕಿ.ಮೀ., ಎಷ್ಟು ಜನಸಂಖ್ಯೆ, ಎಷ್ಟು ಹಂತಗಳಲ್ಲಿ ಯೋಜನಾ ವೆಚ್ಚಗಳ ಸಮಗ್ರ ಮಾಹಿತಿ ಪ್ರತ್ಯೇಕವಾಗಿ ವಿವರ ನೀಡುವುದು ;

(ಆ) ಈ ಯೋಜನೆಗೆ ಬಿಡುಗಡೆಯಾದ ಅನುದಾನದ ಸಮಗ್ರ ವಿವರ ನೀಡುವುದು; ಯಾವ ಮೂಲಗಳಿಂದ ಯಾವ ವರ್ಷಗಳಲ್ಲಿ ಮತ್ತು ಎಷ್ಟು ಅನುದಾನ ಬಿಡುಗಡೆಯಾಗಿದೆ; (ಪ್ರತ್ಯೇಕ ವಿವರ ನೀಡುವುದು);

(ಇ) ಈ ಯೋಜನೆಯ ಅಡಿಯಲ್ಲಿ ಇಲ್ಲಿಯವರೆಗೆ ಕೈಗೊಂಡ ಕಾಮಗಾರಿಯ ಸಮಗ್ರ ವಿವರ ನೀಡುವುದು; ಶೇಕಡಾವಾರು, ಕಿಲೋಮೀಟರ್‌ವಾರು ಪ್ರತ್ಯೇಕವಾಗಿ ವಿವರ ನೀಡುವುದು; ಎಷ್ಟು ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು (ವಿವರ ನೀಡುವುದು) ?

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳ ಹಂಚಿಕೆ**

**ಶ್ರೀ ಅಶ್ವತ್ ನಾರಾಯಣ** (ವಿಧಾನಸಭೆಯಿಂದ ಚುನಾಯಿತರಾದವರು) :-

೪೯೪ (೬೫೦) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅರ್ಕಾವತಿ ಬಡಾವಣೆ ರಚನೆಗೆ ಒಟ್ಟು ಎಷ್ಟು ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ ;

(ಆ) ನ್ಯಾಯಾಲಯದ ಆದೇಶದಂತೆ, ಎಷ್ಟು ಎಕರೆ ಭೂಮಿಯನ್ನು ಭೂ ಸ್ವಾಧೀನದಿಂದ ಕೈಬಿಡಲಾಗಿದೆ ;

(ಇ) ಭೂ ಸ್ವಾಧೀನದಿಂದ ಕೈಬಿಡಲು ಪ್ರಾಧಿಕಾರದ ꠰ ಭೂ ಸ್ವಾಧೀನಾಧಿಕಾರಿಗಳು ನೀಡಿರುವ ಕಾರಣಗಳೇನು ;

(ಈ) ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ್ದ ಭೂ ಮಾಲೀಕರುಗಳ ವಿವರಗಳನ್ನು ನೀಡುವುದು; ಹಾಗೂ ಪ್ರಾಧಿಕಾರದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದ ವಿವರಗಳೊಂದಿಗೆ, ಸರ್ಕಾರದ ತೀರ್ಮಾನಗಳೇನು;

(ಉ) ಅರ್ಕಾವತಿ ಬಡಾವಣೆಯ ಅಭಿವೃದ್ಧಿಗಾಗಿ ಒಟ್ಟು ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ; ಅಭಿವೃದ್ಧಿ ಕಾರ್ಯ ಸಂಪೂರ್ಣಗೊಂಡಿದೆಯೇ (ಇದರ ವಿವರ ಸರ್ಕಾರಕ್ಕೆ ತಿಳಿದಿದ್ದರೆ, ಹಂಚಿಕೆಯಾದ ನಿವೇಶನಗಳ ವಿವರ ನೀಡುವುದು) ?

## ಕಾರಾಗೃಹದಲ್ಲಿ ಕೈದಿಗಳಿಂದ ಪೊಲೀಸರ ಮೇಲೆ ಹಲ್ಲೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೪೯೫ (೬೨೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಜೂನ್ ೨೦೧೪ ರಲ್ಲಿ ಮಂಗಳೂರು ಕಾರಾಗೃಹದಲ್ಲಿ ಕೈದಿಗಳ ಗುಂಪೊಂದು ಪೊಲೀಸರ ಮೇಲೆ ಹಲ್ಲೆ ಮಾಡಿರುವ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಕೈದಿಗಳೇ ಪೊಲೀಸರನ್ನು ಹಲ್ಲೆ ಮಾಡಲು ಕಾರಣವೇನು ;

(ಆ) ಈ ಬಂದೀಖಾನೆಯಲ್ಲಿ ಎಷ್ಟು ಜನ ಕೈದಿಗಳಿದ್ದರು; ಪೊಲೀಸ್ ರಕ್ಷಣಾ ಕಾವಲು ಪಡೆ ಎಷ್ಟಿತ್ತು;

(ಇ) ಕೈದಿಗಳೇ ಪೊಲೀಸರನ್ನು ಥಳಿಸಿದ್ದಾರೆ ಎಂದಾದರೆ, ಪೊಲೀಸ್ ವೈಫಲ್ಯಕ್ಕೆ ಕಾರಣವೇನು ?

## ಬೆಂಗಳೂರು ನಗರದಲ್ಲಿ ಸುರಂಗ ಮಾರ್ಗದ ಅವ್ಯವಸ್ಥೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೪೯೬ (೬೨೨) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದಲ್ಲಿ ಎಷ್ಟು ಪಾದಚಾರಿ ಸುರಂಗ ಮಾರ್ಗಗಳಿವೆ; ಯಾವ ಯಾವ ಸುರಂಗ ಮಾರ್ಗಗಳನ್ನು ಯಾವ ವರ್ಷದಲ್ಲಿ ಪೂರ್ಣಗೊಳಿಸಲಾಯಿತು; ಯಾವ ಯಾವ ಸುರಂಗ ಮಾರ್ಗಗಳಿಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ (ಪ್ರತ್ಯೇಕವಾಗಿ ತಿಳಿಸುವುದು) ;

(ಆ) ಪಾದಚಾರಿ ಸುರಂಗ ಮಾರ್ಗಗಳನ್ನು ಸ್ವಚ್ಛ ಮಾಡಲು ಸ್ವಚ್ಛತಾ ಸಿಬ್ಬಂದಿಗಳನ್ನು ನೇಮಿಸಿಲ್ಲವೇ; ಈ ಸುರಂಗ ಮಾರ್ಗಗಳು ಅವ್ಯವಸ್ಥೆಯಿಂದ ಕೂಡಿರುವುದು (ಮೂತ್ರ ವಿಸರ್ಜಿಸುವುದು, ಕಸದ ರಾಶಿಗಳಿರುವುದು, ನೀರು ನಿಂತಿರುವುದು, ಅನೈತಿಕ ಚಟುವಟಿಕೆ ಇತ್ಯಾದಿ) ಸರ್ಕಾರದ ಗಮನಕ್ಕೆ ಬಂದಿಲ್ಲವೆ ;

(ಇ) ಎಷ್ಟು ಸುರಂಗ ಮಾರ್ಗಗಳಿಗೆ ಭದ್ರತಾ ಸಿಬ್ಬಂದಿಯನ್ನು ನೇಮಿಸಲಾಗಿದೆ; ಯಾವ ಯಾವ ಸುರಂಗ ಮಾರ್ಗಗಳಿಗೆ ಭದ್ರತಾ ಸಿಬ್ಬಂದಿಯನ್ನು ನೇಮಿಸಲಾಗಿದೆ ;

(ಈ) ನೇಮಿಸಿದ್ದರೆ, ಬೆಳಿಗ್ಗೆ ಎಷ್ಟು ಗಂಟೆಯಿಂದ ರಾತ್ರಿ ಎಷ್ಟು ಗಂಟೆಯವರೆಗೆ ಭದ್ರತಾ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ; ಭದ್ರತಾ ಸಿಬ್ಬಂದಿ ಇಲ್ಲದ ವೇಳೆಯಲ್ಲಿ ಸುರಂಗ ಮಾರ್ಗಗಳಲ್ಲಿ ಓಡಾಡದಂತೆ ಬೀಗ ಹಾಕುವುದಿಲ್ಲವೇ ;

(ಉ) ಭದ್ರತಾ ಸಿಬ್ಬಂದಿಯನ್ನು ನೇಮಿಸದಿದ್ದರೆ, ಯಾವ ಕಾರಣಕ್ಕೆ ನೇಮಿಸಿರುವುದಿಲ್ಲ ?

## ಮೈಸೂರು ಮಹಾನಗರ ಪಾಲಿಕೆಗೆ ವಾರ್ಷಿಕ ೧೦೦ ಕೋಟಿ ವಿಶೇಷ ಅನುದಾನ

**ಶ್ರೀ ಸಿ.ಹೆಚ್.ವಿಜಯ ಶಂಕರ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೯೭ (೬೨೫) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಮಹಾನಗರ ಪಾಲಿಕೆಗೆ ಕಳೆದ ಐದು ವರ್ಷಗಳಿಂದ ವಾರ್ಷಿಕ ರೂ.೧೦೦ ಕೋಟಿ ಸನ್ಮಾನ್ಯ ಮುಖ್ಯ ಮಂತ್ರಿಗಳ ವಿಶೇಷ ಅನುದಾನದ ಅಡಿಯಲ್ಲಿ ಲಭ್ಯವಾಗುತ್ತಿರುವುದು ನಿಜವೇ ;

(ಆ) ಈ ರೀತಿ ವಾರ್ಷಿಕ ಬಿಡುಗಡೆಯಾದ ವಿಶೇಷ ಅನುದಾನವನ್ನು ಬಳಕೆ ಮಾಡಲು ಲಭ್ಯವಿರುವ ಕಾರ್ಯಸೂಚಿಗಳೇನು ;

(ಇ) ಸದರಿ ಕಾರ್ಯಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನೋಡಿಕೊಳ್ಳಲು ಯಾವ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ (ಬಳಕೆಯಾದ ಅನುದಾನದ ವಿವರಗಳನ್ನು ಒದಗಿಸುವುದು) ?

## ನಗರಪಾಲಿಕೆ ಹಾಗೂ ಮಹಾನಗರಪಾಲಿಕೆಗಳ ಪೌರಕಾರ್ಮಿಕರಿಗೆ ಸೌಲಭ್ಯಗಳು

**ಶ್ರೀ ಸಿ.ಹೆಚ್.ವಿಜಯ ಶಂಕರ (ವಿಧಾನಸಭೆಯಿಂದ ಚುನಾಯಿತರಾದವರು) :-**

೪೯೮ (೬೨೩) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ನಗರಪಾಲಿಕೆ ಹಾಗೂ ಮಹಾನಗರಪಾಲಿಕೆಗಳಲ್ಲಿ ಪೌರಕಾರ್ಮಿಕರಾಗಿ ಕೆಲಸ ಮಾಡುವ ಕೆಲಸಗಾರರಿಗೆ, ಅವರ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ, ಅವರ ಆರೋಗ್ಯ, ಕೆಲಸದ ಅನುಕೂಲತೆ ಹಾಗೂ ಸುರಕ್ಷತೆಯ ದೃಷ್ಟಿಯ ಹಿನ್ನೆಲೆಯಲ್ಲಿ ಸರ್ಕಾರದ ನಿಯಮದ ಅನ್ವಯ ಒದಗಿಸಬೇಕಾದ ಪೂರಕ ಸೌಲಭ್ಯಗಳೇನು ;

(ಆ) ನಗರಪಾಲಿಕೆ ಹಾಗೂ ಮಹಾನಗರ ಪಾಲಿಕೆಯ ಪೌರಕಾರ್ಮಿಕರಿಗೆ ಅವರ ಸದರಿ ಅವಶ್ಯಕತೆಗಳನ್ನು ಒದಗಿಸಲು ವಿಶೇಷ ಅನುದಾನವನ್ನು ಆಯಾ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಬೇಕೆಂದು ಕಡ್ಡಾಯ ನಿಯಮ ಜಾರಿಯಲ್ಲಿದೆಯೇ ;

(ಇ) ಹಾಗಿದ್ದಲ್ಲಿ. ರಾಜ್ಯದ ಬಹುತೇಕ ಪಾಲಿಕೆಗಳಲ್ಲಿ ಪೌರಕಾರ್ಮಿಕರಿಗೆ ಕರ್ತವ್ಯ ನಿರ್ವಹಣೆಯ ಸುರಕ್ಷತೆ ದೃಷ್ಟಿಯಿಂದ ಒದಗಿಸಬೇಕಾಗುವ (ಕೈಗವಚ, ಬೂಟುಗಳು ಹಾಗೂ ಇತರೆ) ಸೌಲಭ್ಯಗಳನ್ನು ಒದಗಿಸಲಾಗುತ್ತಿಲ್ಲ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಸದರಿ ನಿಯಮ ಪಾಲಿಸದೇ ಇರುವ ನಗರಪಾಲಿಕೆ ಮತ್ತು ಮಹಾನಗರ ಪಾಲಿಕೆಗಳ ವಿರುದ್ಧ ಸರ್ಕಾರ ತೆಗೆದುಕೊಳ್ಳುತ್ತಿರುವ ಕಾನೂನು ರೀತ್ಯಾ ಕ್ರಮಗಳೇನು; ಮತ್ತು ಮುಂದಿನ ದಿನಗಳಲ್ಲಿ ಸದರಿ ವ್ಯವಸ್ಥೆಯನ್ನು ಕಡ್ಡಾಯಗೊಳಿಸಲು ಸರ್ಕಾರದ ಮುಂದಿರುವ ಯೋಜನೆಗಳೇನು ?

## ಬಾಂಬೆ ಪಬ್ಲಿಕ್ ಟ್ರಸ್ಟ್ ಆಕ್ಟ್ ಜಾರಿ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಬೈಲಹೊಂಗಲ ಕ್ಷೇತ್ರ) :–**

೪೯೯ (೬೩೦) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಂಬೆ ಪಬ್ಲಿಕ್ ಟ್ರಸ್ಟ್ ಆಕ್ಟ್ ಜಾರಿಯಲ್ಲಿ ಇಲ್ಲದೆ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದರಿಂದ ಹೊಸ ಕಾಯ್ದೆ ಜಾರಿಗೆ ಬರುವವರೆಗೆ (ತಾತ್ಕಾಲಿಕವಾಗಿ) ಈಗಿರುವ ಕಾಯ್ದೆಯನ್ನು ಮುಂದುವರೆಸಲು ಸರ್ಕಾರಿ ಆದೇಶ ಹೊರಡಿಸಲಾಗುವುದೇ ;

(ಆ) ಈ ಆಕ್ಟ್ ಪ್ರಕಾರ ರಜಿಸ್ಟರ್ ಆದ ದೇವಸ್ಥಾನಗಳು ಅಭಿವೃದ್ಧಿ ಸಲುವಾಗಿ ಬ್ಯಾಂಕಿನಿಂದ ಸಾಲ ಪಡೆಯಬೇಕಾಗಿದ್ದಲ್ಲಿ ಈಗ ಯಾವ ಅಧಿಕಾರಿಗಳ ಕಡೆಯಿಂದ ಯಾವ ಕಾಯಿದೆ ನಿಯಮಗಳ ಅನ್ವಯ ಪರವಾನಗಿ ಪಡೆಯಬೇಕು ;

(ಇ) ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನ ಹಾಗೂ ಬೆಳಗಾವಿ ಜಿಲ್ಲೆ ಬೈಲಹೊಂಗಲ, ಸವದತ್ತಿ ತಾಲ್ಲೂಕುಗಳ ಬಗ್ಗೆ ಸರ್ಕಾರವು ಹೊರಡಿಸಿದ (ಮುಜರಾಯಿ ಇಲಾಖೆಯವರು) ಅಧಿಸೂಚಿತ ದೇವಸ್ಥಾನಗಳ ಪಟ್ಟಿಯಲ್ಲಿ ಸನ್ ೨೦೦೩ರಲ್ಲಿ ಅಥವಾ ಅದಕ್ಕೂ ಮೊದಲು ಅಥವಾ ನಂತರದಲ್ಲಿ ಯಾವ-ಯಾವ ದೇವಸ್ಥಾನಗಳು ಸೇರಿರುತ್ತವೆ ;

(ಈ) ಬಾಂಬೆ ಪಬ್ಲಿಕ್ ಟ್ರಸ್ಟ್ ಆಕ್ಟ್ ಪ್ರಕಾರ ರಿಜಿಸ್ಟರ್ ಆದ ಕಲ್ಯಾಣ ಮಂಟಪದವರು ಪ್ರತಿ ವರ್ಷ ಆಡಿಟ್ ರಿಪೋರ್ಟ್ ಯಾವ ಅಧಿಕಾರಿ ಕಡೆಗೆ ಹೊಸ ಆಕ್ಟ್ ಜಾರಿಗೆ ಬರುವವರೆಗೆ ಸಲ್ಲಿಸಬೇಕು; ಹಾಗೂ ಈ ಆಕ್ಟ್ ಪ್ರಕಾರ ರಿಜಿಸ್ಟರ್ ಆದ ದೇವಸ್ಥಾನಗಳು ಪ್ರತಿವರ್ಷ ಆಡಿಟ್ ರಿಪೋರ್ಟ್ ಯಾವ ಅಧಿಕಾರಿ ಕಡೆಗೆ ಹೊಸ ಆಕ್ಟ್ ಜಾರಿಗೆ ಬರುವವರೆಗೆ ಸಲ್ಲಿಸಬೇಕು;

(ಉ) ಬಾಂಬೆ ಪಬ್ಲಿಕ್ ಟ್ರಸ್ಟ್ ಆಕ್ಟ್ ಪ್ರಕಾರ ರಿಜಿಸ್ಟರ್ ಆದ ಶಿಕ್ಷಣ ಸಂಸ್ಥೆಗಳು ಪ್ರತಿ ವರ್ಷ ಆಡಿಟ್ ರಿಪೋರ್ಟ್ (ಚಾರ್ಟಡ್ ಅಕೌಂಟೆಂಟ್ ಕಡೆಯಿಂದ ಮಾಡಿಸಿದ್ದು) ಯಾವ ಅಧಿಕಾರಿ ಕಡೆಗೆ ಹೊಸ ಆಕ್ಟ್ ಜಾರಿಗೆ ಬರುವವರೆಗೆ ಸಲ್ಲಿಸಬೇಕು; ಹಾಗೂ ಈ ಟ್ರಸ್ಟ್ ಪ್ರಕಾರ ರಿಜಿಸ್ಟರ್ ಆದ ಶಿಕ್ಷಣ ಸಂಸ್ಥೆ, ಕಲ್ಯಾಣ ಮಂಟಪ, ದೇವಸ್ಥಾನಗಳ (ಚೇಂಜ್ ರಿಪೋರ್ಟ್ ಬದಲಾವಣೆ ಅಮೆಂಡ್‌ಮೆಂಟ್ ಮಾಡಬೇಕಾಗಿದ್ದಲ್ಲಿ) ಯಾವ ಅಧಿಕಾರಿಗಳ ಕಡೆಯಿಂದ ಯಾವ ಕಾಯಿದೆ, ಕಲಂ ಪ್ರಕಾರ ಮಾಡಿಸಬೇಕು ;

(ಋ) ಎಂಡೋಮೆಂಟ್ ಇಲಾಖೆಯಿಂದ ಬಿಡುಗಡೆಯಾದ ಹಣವನ್ನು ಜಿಲ್ಲಾಧಿಕಾರಿಗಳು ಅಥವಾ ಅಸಿಸ್ಟೆಂಟ್ ಚಾರಿಟಿ ಕಮೀಷನರ್

ಕಡೆಯಿಂದ ಪಡೆಯಬೇಕಾಗಿದ್ದಲ್ಲಿ ಟ್ರಸ್ಟ್ ರಿಜಿಸ್ಟ್ರೇಷನ್ ಮಾಡುವುದು ಅವಶ್ಯವಿರುವುದೇ; ಹಾಗೂ ಅಸಿಸ್ಟೆಂಟ್ ಚಾರಿಟಿ ಕಮೀಷನರ್ ಕಡೆಯಿಂದ ಈ ಹಿಂದೆ ರಿಜಿಸ್ಟ್ರೇಷನ್ ಆದ ಸಂಸ್ಥೆಗಳು ಹಣ ಪಡೆಯುವ ಕಾಲಕ್ಕೆ ಚಾರ್ಟಡ್ ಅಕೌಂಟೆಂಟ್ ಕಡೆಯಿಂದ ಆಡಿಟ್ ಮಾಡಿಸಿ, ಆಡಿಟ್ ರಿಪೋರ್ಟ್ ಕೊಟ್ಟು ಹಣ ಪಡೆಯುವುದು ಅವಶ್ಯವಿರುವುದೇ ; ಹೇಗೆ ?

## ರಾಜ್ಯ ಸರ್ಕಾರ ಮಾಡಿದ ಸಾಲದ ವಿವರ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೫೦೦ (೬೨೯) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯ ಸರ್ಕಾರ ೩೧ ಮಾರ್ಚ್ ೨೦೧೪ರ ವರೆಗೆ ಎಷ್ಟು ಸಾಲ ಮಾಡಿರುತ್ತದೆ; ಹಾಗೂ ಇನ್ನೂ ಎಷ್ಟು ಸಾಲ ಹಿಂದಿರುಗಿಸಬೇಕಾಗಿರುತ್ತದೆ ;

(ಆ) ಎಲ್ಲೆಲ್ಲಿ ಸಾಲ ಮಾಡಲಾಗಿದೆ; ಕೇಂದ್ರದಿಂದ ಎಷ್ಟು; ಹೊರ ರಾಷ್ಟ್ರಗಳಿಂದ ಎಷ್ಟು; ಯಾವ-ಯಾವ ಸಂಸ್ಥೆಗಳಿಂದ ಎಷ್ಟು; (ವಿವರಗಳನ್ನು ನೀಡುವುದು) ;

(ಇ) ಪ್ರತಿ ವರ್ಷ ಎಷ್ಟು ಬಡ್ಡಿಯನ್ನು ಪಾವತಿಸಲಾಗುತ್ತಿದೆ; ಕಳೆದ ಮೂರು ವರ್ಷಗಳಲ್ಲಿ ಪ್ರತಿ ವರ್ಷ ಎಷ್ಟು ಬಡ್ಡಿ ಪಾವತಿಸಲಾಗಿದೆ ;

(ಈ) ರಾಜ್ಯದ ಪ್ರತಿಯೊಬ್ಬ ಪ್ರಜೆಯ ಮೇಲೆ ಎಷ್ಟು ಸಾವಿರ ರೂ.ಗಳ ಸಾಲವಿದೆ ಎಂದು ಅಂದಾಜು ಮಾಡಲಾಗಿದೆ ?

## ಬಾರ್ ಅಸೋಸಿಯೇಷನ್‌ಗಳ ಅನುದಾನ ಹೆಚ್ಚಿಸುವುದು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೫೦೧ (೬೨೬) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತಾಲ್ಲೂಕು, ಜಿಲ್ಲಾ ಹಾಗೂ ಬೆಂಗಳೂರು ಬಾರ್ ಅಸೋಸಿಯೇಷನ್‌ದವರಿಗೆ ಸರ್ಕಾರದಿಂದ ಎಷ್ಟು ಅನುದಾನ ಕೊಡಲಾಗುತ್ತಿದೆ; (ವಿವರ ನೀಡುವುದು);

(ಆ) ಈ ಅನುದಾನ ಬಾರ್ ಅಸೋಸಿಯೇಷನ್‌ಗಳಿಗೆ ಸಾಕಾಗುತ್ತಿಲ್ಲವೆಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ತಾಲ್ಲೂಕು ಬಾರ್ ಅಸೋಸಿಯೇಷನ್‌ಗಳಿಗೆ ಪ್ರತಿ ವರ್ಷ ಹತ್ತು ಲಕ್ಷ ರೂ. ಹಾಗೂ ಜಿಲ್ಲಾ ಬಾರ್ ಅಸೋಸಿಯೇಷನ್‌ಗಳಿಗೆ ಐವತ್ತು ಲಕ್ಷ ರೂ. ಅನುದಾನ ಕೊಡಲು ಕ್ರಮ ಕೈಗೊಳ್ಳಲಾಗುವುದೇ;

(ಈ) ಈ ಪ್ರಕಾರ ಅನುದಾನ ಕೊಟ್ಟಲ್ಲಿ ಸರ್ಕಾರದ ಮೇಲೆ ಎಷ್ಟು ಆರ್ಥಿಕ ಹೊರೆ ಬೀಳುವುದು ?

# ಕಾನೂನು ಮಹಾವಿದ್ಯಾಲಯಗಳನ್ನು ಅನುದಾನಕ್ಕೆ ಒಳಪಡಿಸುವುದು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೫೦೨ (೬೨೮) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಎಷ್ಟು ಖಾಸಗಿ ಕಾನೂನು ಮಹಾವಿದ್ಯಾಲಯಗಳಿವೆ (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಅವುಗಳಲ್ಲಿ ಎಷ್ಟು ಕಾಲೇಜುಗಳು ಈಗಾಗಲೇ ಅನುದಾನಕ್ಕೆ ಒಳಪಟ್ಟಿರುತ್ತವೆ; ಹಾಗೂ ಇನ್ನು ಎಷ್ಟು ಕಾಲೇಜುಗಳು ಅನುದಾನಕ್ಕೆ ಒಳಪಡಬೇಕಾಗಿವೆ (ಜಿಲ್ಲಾವಾರು ಮಾಹಿತಿ ನೀಡುವುದು) ;

(ಇ) ಯಾವ ಮಾನದಂಡದ ಮೇಲೆ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲಾಗುವುದು; ಏನಾದರೂ ನಿರ್ದಿಷ್ಟ ನಿಯಮಗಳನ್ನು ರೂಪಿಸಲಾಗಿದೆಯೇ; ನಿರ್ದಿಷ್ಟ ನಿಯಮಗಳು ಇಲ್ಲದೆ ಹೋದಲ್ಲಿ ನಿಯಮಗಳನ್ನು ರೂಪಿಸಲು ಕ್ರಮ ಕೈಗೊಳ್ಳಲಾಗುವುದೇ; ಹಾಗೂ ಈ ವರ್ಷ ಎಷ್ಟು ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲು ನಿರ್ಧರಿಸಲಾಗಿದೆ; (ಆ ಕಾಲೇಜುಗಳ ಹೆಸರು ತಿಳಿಸುವುದು) ;

(ಈ) ಹತ್ತು ವರ್ಷ ಮುಗಿಸಿದ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಿದಲ್ಲಿ ಸರ್ಕಾರದ ಮೇಲೆ ಎಷ್ಟು ಆರ್ಥಿಕ ಹೊರೆ ಬೀಳುವುದು; ಹತ್ತು ವರ್ಷ ಮುಗಿಸಿದ ಕಾಲೇಜುಗಳ ಹೆಸರು ತಿಳಿಸುವುದು ;

(ಉ) ಒಂದು ಕಾಲೇಜನ್ನು ಅನುದಾನಕ್ಕೆ ಒಳಪಡಿಸಿದಲ್ಲಿ ಸರ್ಕಾರದ ಮೇಲೆ (ಸರಾಸರಿ) ಎಷ್ಟು ಆರ್ಥಿಕ ಹೊರೆ ಬೀಳುವುದು ;

(ಊ) ಸರ್ಕಾರವು ಬೇರೆ ಕಾಲೇಜುಗಳಿಗೆ ಸಹಾಯ ಮಾಡುವಂತೆ ಕಾನೂನು ಕಾಲೇಜುಗಳಿಗೂ ಸಹ ಸಹಾಯ ಮಾಡುವುದೇ ;

(ಋ) ಬೆಳಗಾವಿ, ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಅನುದಾನಕ್ಕೆ ಒಳಪಡದ ಎಷ್ಟು ಕಾನೂನು ಮಹಾವಿದ್ಯಾಲಯಗಳು ಇರುತ್ತವೆ; ಹಾಗೂ ಅವು ಯಾವ ವರ್ಷದಿಂದ ಪ್ರಾರಂಭವಾಗಿವೆ (ವಿವರ ನೀಡುವುದು) ;

(ೠ) ಪ್ರಾರಂಭವಾಗಿ ಹತ್ತು ವರ್ಷ ಮುಗಿಸಿದ ಎಲ್ಲಾ ಕಾಲೇಜುಗಳಿಗೆ ಅನುದಾನ ನೀಡಲು ಕ್ರಮ ಕೈಗೊಳ್ಳಲಾಗುವುದೇ ?

## ಮಹಾನಗರ ಪಾಲಿಕೆಗಳ ಸುಧಾರಣೆಗಳು

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೫೦೩ (೬೩೩) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಮಹಾನಗರ ಪಾಲಿಕೆಗಳ ಸುಧಾರಣೆಗಾಗಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಆ) ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಪರಿಣಾಮಕಾರಿ ತೆರಿಗೆ ವಸೂಲಿಗೆ ಸರ್ಕಾರ ಹಾಕಿಕೊಂಡ ಕ್ರಮಗಳೇನು; ಕಳೆದ ಮೂರು ವರ್ಷಗಳಲ್ಲಿ ವಸೂಲಾದ ತೆರಿಗೆಯ ಶೇಕಡಾವಾರು ಪ್ರಮಾಣವೆಷ್ಟು; (ಮಹಾನಗರ ಪಾಲಿಕೆವಾರು ವಿವರ ನೀಡುವುದು);

(ಇ) ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಆಧುನಿಕ ತಂತ್ರಜ್ಞಾನವಾದ ಜಿ.ಪಿ.ಎಸ್ ಅಳವಡಿಸಿ ಕಟ್ಟಡದ ತಳಪಾಯದಿಂದ ಹಿಡಿದು ಪೂರ್ಣ ನಿರ್ಮಾಣದ ತನಕ ಕಛೇರಿಯಲ್ಲಿ ಕುಳಿತು ನಿಯಂತ್ರಿಸುವ ವ್ಯವಸ್ಥೆ ಕಲ್ಪಿಸಲಾಗುವುದೇ; ವಿದ್ಯುಚ್ಛಕ್ತಿ, ಒಳಚರಂಡಿ ಮತ್ತು ಮೂಲಭೂತ ಅವಶ್ಯಕತೆಗಳನ್ನು ಆಧುನಿಕ ತಂತ್ರಜ್ಞಾನದ ಮೂಲಕ ನಿಯಂತ್ರಣದಲ್ಲಿಡಲು ಸಾಧ್ಯವಿಲ್ಲವೇ ?

## ಅಕ್ರಮ ಗಣಿಗಾರಿಕೆಯಿಂದ ಸರ್ಕಾರಕ್ಕಾಗುತ್ತಿರುವ ನಷ್ಟ

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೫೦೪ (೬೩೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆಯಿಂದ ರಾಜ್ಯದ ಬೊಕ್ಕಸಕ್ಕಾಗುತ್ತಿರುವಂತಹ ಕೋಟ್ಯಾಂತರ ರೂಪಾಯಿ ನಷ್ಟವನ್ನು ತಪ್ಪಿಸಲು ಸರ್ಕಾರ ಹಾಕಿಕೊಂಡ ನಿಯಂತ್ರಣ ಕ್ರಮಗಳೇನು ;

(ಆ) ರಾಜ್ಯದ ಪ್ರತಿ ಗ್ರಾಮಗಳಲ್ಲಿ ನಡೆಯುತ್ತಿರತಕ್ಕಂತಹ ಅಕ್ರಮ ಗಣಿಗಾರಿಕೆಗಳಿಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಲೆಕ್ಕಿಗರು ಮತ್ತು ಗಣಿ ಇಲಾಖೆಯ ಅಧಿಕಾರಿಗಳನ್ನು ಹೊಣೆ ಮಾಡಿ ಸರ್ಕಾರದ ಬೊಕ್ಕಸಕ್ಕಾಗಿರುವ ನಷ್ಟವನ್ನು ಇವರಿಂದ ಭರಿಸಲಾಗುವುದೇ;

(ಇ) ರಾಜ್ಯದಲ್ಲಿ ಗಣಿಗಾರಿಕೆಗೆ ಜಿ.ಪಿ.ಎಸ್ ಮತ್ತು ಗೂಗಲ್ ಅರ್ಥ್ ಸೌಲಭ್ಯವನ್ನು ಅಳವಡಿಸುವುದರ ಮುಖಾಂತರ ಪರವಾನಗಿ ಹೊಂದಿದವರು ಸರ್ಕಾರದ ಬೊಕ್ಕಸಕ್ಕೆ ಮಾಡತಕ್ಕಂತಹ ನಷ್ಟವನ್ನು ತಪ್ಪಿಸಲು ಸಾಧ್ಯವಾಗುವುದಿಲ್ಲವೆ ?

## ಸಾರ್ವಜನಿಕ ಸ್ವತ್ತುಗಳ ಕಳವು

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೫೦೫ (೬೩೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಉಡುಪಿ ಜಿಲ್ಲೆಯಲ್ಲಿ ಸಾರ್ವಜನಿಕ ಸ್ವತ್ತುಗಳಾದ ಸೋಲಾರ್ ದಾರಿದೀಪದ ಬ್ಯಾಟರಿ, ಕೇಬಲ್ ವಯರ್‌ಗಳು, ಪಂಪು ಸೆಟ್‌ಗಳು ಕಳವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಕುಂದಾಪುರ ತಾಲ್ಲೂಕು ಶಂಕರನಾರಾಯಣ ಪೊಲೀಸ್ ಠಾಣಾ ವ್ಯಾಪ್ತಿಯ ಹಾಲಾಡಿ ಗ್ರಾಮದ ಭತ್ತಗುಳಿ ಕೊರಗರ ಕಾಲೋನಿಯ ನೀರಾವರಿ ಪಂಪುಸೆಟ್ ಕಳುವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಮುಗ್ಧ, ಅಮಾಯಕ ಜನರ, ರೈತರ ಕಳುವಾದ ನೀರಾವರಿ ಪಂಪುಸೆಟ್‌ಗಳನ್ನು ಪತ್ತೆ ಹಚ್ಚಲು ವಿಶೇಷ ತನಿಖಾ ತಂಡವನ್ನು ರಚಿಸಲಾಗುವುದೇ; ಇಲ್ಲವಾದಲ್ಲಿ ಕಾರಣವೇನು ?

## ಕೆ.ಎಂ.ಎಫ್ ನಿಂದ ಸರಬರಾಜಾಗುತ್ತಿರುವ ಕಳಪೆ ಪಶು ಆಹಾರ

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೫೦೬ (೬೩೪) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕೆ.ಎಂ.ಎಫ್.ನಿಂದ ಸರಬರಾಜಾಗುತ್ತಿರುವ "ನಂದಿನಿ" ಬ್ರಾಂಡ್‌ನ ಪಶು ಆಹಾರವು ಕಳಪೆ ಗುಣಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಹೈನುಗಾರರಿಗೆ ಪೂರೈಕೆಯಾಗುತ್ತಿರುವ ಕಳಪೆ ಗುಣಮಟ್ಟದ ಪಶು ಆಹಾರಗಳನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಗೋಮಾಳಗಳು

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೫೦೭ (೬೩೫) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿರುವ ಗೋಮಾಳಗಳ ಒಟ್ಟು ವಿಸ್ತೀರ್ಣವೆಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಗೋಮಾಳಗಳಲ್ಲಿ ಪಶುಸಂಗೋಪನಾ ಇಲಾಖೆಯು ಎಷ್ಟು ವಿಸ್ತೀರ್ಣವನ್ನು ಬಳಕೆ ಮಾಡಿಕೊಂಡಿದೆ; ಇಲ್ಲವಾದಲ್ಲಿ, ಕಾರಣವೇನು (ತಾಲ್ಲೂಕುವಾರು ವಿವರ ನೀಡುವುದು) ;

(ಇ) ರಾಜ್ಯದಲ್ಲಿ ಗೋಮಾಳಗಳ ರಕ್ಷಣೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಕುಡಿಯುವ ನೀರಿನ ಸಮಸ್ಯೆ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೫೦೮ (೬೪೧) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಮಹಾನಗರ ಹಾಗೂ ಗ್ರಾಮಾಂತರ ಸುತ್ತಮುತ್ತ ಮತ್ತು ಕರಾವಳಿಯ ಮಂಗಳೂರು ಮಹಾನಗರ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ನಿಟ್ಟಿನಲ್ಲಿ ನಗರ ಪಾಲಿಕೆ ಸ್ಥಳೀಯ ಸಂಸ್ಥೆಗಳು ತೆಗೆದುಕೊಂಡಿರುವ ತುರ್ತು ಕ್ರಮಗಳೇನು ; ಪ್ರತಿ ಬೇಸಿಗೆಯಲ್ಲಿ ಕಂಡುಬರುವ ಈ ಸಮಸ್ಯೆಗೆ ಶಾಶ್ವತ ಪರಿಹಾರಕ್ಕೆ ಯಾವ ಕ್ರಮಕ್ಕೆ ಸರ್ಕಾರ ಮುಂದಾಗಿದೆ ;

(ಇ) ಸದರಿ ಸಮಸ್ಯೆ ಉಲ್ಬಣಗೊಂಡ ಪರಿಣಾಮ ಟ್ಯಾಂಕರ್ ಮೂಲಕ ಸರಬರಾಜು ಮಾಡುವ ನೀರಿನ ಟ್ಯಾಂಕರ್‌ಗಳ ಬೆಲೆಯನ್ನು ದುಬಾರಿ ಮಾಡಿರುವುದು ನಿಜವೇ ;

(ಈ) ಟ್ಯಾಂಕರ್‌ಗಳ ಬೆಲೆ ನಿಗದಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಖಾಸಗಿಯವರ ಹಣ ವಸೂಲಿಗೆ ಕಡಿವಾಣ ಹಾಕುವುದಕ್ಕೆ ಸರ್ಕಾರ ಮುಂದಾಗಿದೆಯೆ ;

(ಉ) ಸರ್ಕಾರ ನಿಗದಿತ ಬೆಲೆ ಗೊತ್ತುಪಡಿಸಲು ಇರುವ ತೊಂದರೆಗಳೇನು (ಹಾಲಿ ಬೆಲೆ ವಿವರ ನೀಡುವುದು) ; ಬೇಸಿಗೆ ಕಾಲದಲ್ಲಿ ತಾತ್ಕಾಲಿಕ ನೀರಿನ ಸರಬರಾಜು ವ್ಯವಸ್ಥೆಗೆ ಸರ್ಕಾರ ಖರ್ಚು ಮಾಡುವ ಮೊತ್ತ ಎಷ್ಟು ?

## ಉಗ್ರ ಚಟುವಟಿಕೆ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೫೦೯ (೬೪೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಬೆಂಗಳೂರು ಸೇರಿದಂತೆ ಪ್ರಮುಖ ನಗರಗಳ ಮೇಲೆ ಉಗ್ರರು ಗುರಿ ಮಾಡಿಕೊಂಡಿರುವ ಸಂಗತಿ ಬೆಳಕಿಗೆ ಬಂದಿದೆಯೇ ;

(ಆ) ಈ ಕೃತ್ಯಕ್ಕೆ ಯಾವ ರೀತಿಯ ಬಾಂಬ್ ದಾಳಿಗೆ ಉಗ್ರರ ತಂಡ ತಯಾರಾಗಿತ್ತು ; ಇದು ಬೆಳಕಿಗೆ ಬಂದದ್ದು ಹೇಗೆ ;

(ಇ) ಈ ನಿಟ್ಟಿನಲ್ಲಿ ಮುಂಜಾಗ್ರತೆಯಾಗಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು ; ಭದ್ರತೆಗೆ ತೆಗೆದುಕೊಂಡ ತೀರ್ಮಾನಗಳೇನು ;

(ಈ) ಇಷ್ಟಲ್ಲದೇ ಇಸ್ರೇಲಿ ದೂತವಾಸದ ಮೇಲೆ ಉಗ್ರರು ಸಂಚು ರೂಪಿಸಿದ್ದರೆ ; ಇದು ಬೆಂಗಳೂರಿನಿಂದ ಕಾರ್ಯಾಚರಣೆ ಎಂಬುದರ ಬಗ್ಗೆ ಸರ್ಕಾರದ ನಿಲುವೇನು ;

(ಉ) ಇದರ ಯೋಜನೆ ತಯಾರಿಯ ಹುನ್ನಾರದ ರೂವಾರಿಗಳು ಯಾರು ; ಇದರ ಸಂಶಯದ ಮೇಲೆ ಈಗಾಗಲೇ ಎಷ್ಟು ಜನರನ್ನು ಬಂಧಿಸಲಾಗಿದೆ ; ವಿಚಾರಣೆ, ತನಿಖೆ ಯಾವ ಹಂತದಲ್ಲಿದೆ ; ಸ್ಕೆಚ್‌ಗೆ ಸಂಬಂಧಪಟ್ಟ ಕಾಗದ ಪತ್ರ ದಾಖಲೆ, ಮೊಬೈಲ್ ಇತ್ಯಾದಿ ನಕ್ಷೆಗಳನ್ನು ವಶಪಡಿಸಿಕೊಳ್ಳಲಾಗಿದೆಯೇ (ವಿವರಗಳನ್ನು ಒದಗಿಸುವುದು) ?

## ಕಸ ವಿಲೇವಾರಿ ಹಾಗೂ ನಗರ ನೈರ್ಮಲ್ಯ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):-**

೫೧೦ (೬೪೪) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದಲ್ಲೆಡೆ ಸಮರ್ಪಕವಾಗಿ ಕಸ ವಿಲೇವಾರಿಯಾಗದಿರುವುದು ಸರ್ಕಾರದ ಗಮನಕ್ಕೆ ತಿಳಿದಿದೆಯೇ ; ಕಸದ ಸಮಸ್ಯೆಯಿಂದ ಜನಸಾಮಾನ್ಯರು ಖಾಯಿಲೆಗಳಿಗೆ ತುತ್ತಾಗಬಹುದಾದ ಸಾಧ್ಯತೆಗಳಿದೆಯೇ ; ಕಸದ ಶಾಶ್ವತ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಲ್ಲಿ ಸರ್ಕಾರ ವಿಫಲವಾಗಿದೆಯೇ ;

(ಆ) ನಗರದ ಕಸವನ್ನು ಮಂಡೂರು ಗ್ರಾಮದಲ್ಲಿ ಸುರಿಯುತ್ತಿರುವುದರಿಂದ ಗ್ರಾಮಸ್ಥರಿಗೆ ಸಮಸ್ಯೆಯಾಗಿರುವುದು ನಿಜವೇ ; ಕಸದ ಸಮಸ್ಯೆಯಿಂದ ಎಷ್ಟು ಜನರು ಅಸ್ವಸ್ಥರಾಗಿದ್ದಾರೆ ; ಎಷ್ಟು ಜನರು ಚಿಕಿತ್ಸೆ ಪಡೆಯುತ್ತಿದ್ದಾರೆ (ವಿವರ ನೀಡುವುದು) ;

(ಇ) ಕಸ ವಿಲೇವಾರಿಯಲ್ಲಿ ಆಧುನಿಕ ತಂತ್ರಜ್ಞಾನದ ಮೂಲಕ ಶಾಶ್ವತ ಪರಿಹಾರ ಕಂಡುಕೊಳ್ಳಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಕಸ ವಿಲೇವಾರಿ ಘಟಕ ಬೇರೆಡೆ ಸ್ಥಾಪಿಸಲು ಸರ್ಕಾರ ಯೋಜನೆ ರೂಪಿಸಿದೆಯೇ ; ಎಲ್ಲಿ ರೂಪಿಸಿದೆ (ವಿವರ ನೀಡುವುದು) ;

(ಈ) ನಗರದ ಜನತೆ ಹಸಿ ಕಸ, ಒಣ ಕಸ ಬೇರ್ಪಡಿಸಿ ಕೊಟ್ಟರೂ ಅದನ್ನು ಸಾಗಿಸುವಾಗ ಒಟ್ಟಿಗೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಲ್ಲಿ ಕ್ರಮ ಜರುಗಿಸಿದೆಯೇ ;

(ಉ) ಕಸದ ಸಮಸ್ಯೆ ಉಲ್ಬಣಿಸದಂತೆ ಸರ್ಕಾರ ಇದುವರೆಗೆ ಕೈಗೊಂಡ ಕ್ರಮಗಳೇನು (ವಿವರ ನೀಡುವುದು) ; ಕಸದ ಶಾಶ್ವತ ಪರಿಹಾರಕ್ಕೆ ಸರ್ಕಾರ ಯಾವ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದೆ ?

## ನಗರದಲ್ಲಿ ಗ್ರಾಹಕರ ಸುರಕ್ಷತೆ ಮತ್ತು ಮುಂಜಾಗ್ರತೆ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):-**

೫೧೧ (೬೪೦) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಇತ್ತೀಚೆಗೆ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಬೆಳಿಗ್ಗೆ-ಸಂಜೆ ವೇಳೆ ನಡೆಯುತ್ತಿರುವ ಸರಗಳ್ಳತನ ಪ್ರಕರಣಗಳು ಬೆಳಕಿಗೆ ಬರುತ್ತಿವೆಯೇ ; ಕಳೆದ ಒಂದು ವರ್ಷದಲ್ಲಿ ಜರುಗಿದ ಈ ರೀತಿಯ ಸರಗಳ್ಳತನ ಪ್ರಕರಣದ ವಿವರಗಳನ್ನು ವಿಧಾನ ಸಭಾ ಕ್ಷೇತ್ರವಾರು ನೀಡುವುದು ;

(ಆ) ಇದಕ್ಕೆ ಪೊಲೀಸರ ನಿರ್ಲಕ್ಷ್ಯತನ ಕಾರಣವೆಂಬುದು ನಿಜವೇ ಆಗಿದ್ದಲ್ಲಿ, ಸಮರ್ಪಕ (ನಿಗಾ ಮತ್ತು ಪಹರೆ) ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಪೊಲೀಸರು ವಿಫಲರಾದರೇ ;

(ಇ) ಬೈಕ್‌ನಲ್ಲಿ ಬರುವುದು, ಹಿಂಬಾಲಿಸುವುದರ ಜೊತೆಗೆ ಪೊಲೀಸರ ವೇಷದಲ್ಲಿ ಬಂದು ರಕ್ಷಣೆ ಕೊಡುವಂತೆ ನಟಿಸಿ ಅವರ ಆಭರಣ, ಹಣ ದೋಚುವ ಪ್ರಕರಣ ಕಂಡು ಬಂದಿದೆಯೇ ;

(ಈ) ಈ ನಕಲು ವೇಷದ ಪತ್ತೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಉ) ಗಸ್ತು ಇಲ್ಲದ ಜಾಗದಲ್ಲಿ ಸರ್ಕಾರ ಸಿ.ಸಿ.ಟಿ.ವಿ. ಅಳವಡಿಸಲು ಮುಂದಾಗುವುದೇ (ವಿವರ ಒದಗಿಸುವುದು) ; ಈಗಾಗಲೇ ನಗರದ ಯಾವ ಭಾಗಗಳಲ್ಲಿ ಸಿ.ಸಿ.ಟಿ.ವಿ. ಅಳವಡಿಸಲಾಗಿದೆ (ಮಹಾನಗರ ಪಾಲಿಕೆ ವಾರ್ಡುವಾರು ವಿವರ ನೀಡುವುದು) ?

## ರಾಷ್ಟ್ರಪುರುಷ ಶಿವಾಜಿ ಮಹಾರಾಜರ ಕುರಿತು ಅಂತರ್‌ಜಾಲದಲ್ಲಿ ಅವಹೇಳನಕಾರಿ ಮಾತುಗಳು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೫೧೨ (೬೪೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಷ್ಟ್ರಪುರುಷ ಶಿವಾಜಿ ಮಹಾರಾಜರ ಕುರಿತು ಅಂತರ್‌ಜಾಲದ ಮುಖಾಂತರ ಅವಹೇಳನಕಾರಿ ಮಾತುಗಳನ್ನು ಮತ್ತು ಚಿತ್ರಗಳನ್ನು ಕಿಡಿಗೇಡಿಗಳು ಅಂತರ್‌ಜಾಲದಲ್ಲಿ ಬಿತ್ತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಪ್ರಕರಣಗಳಲ್ಲಿ ಗೃಹ ಇಲಾಖೆಯು ಕೈಗೊಂಡ ಕ್ರಮವೇನು ?

## ಶ್ರೀ ಯಲ್ಲಮ್ಮ ಗುಡ್ಡದಲ್ಲಿ ಮೂಲಭೂತ ಸೌಕರ್ಯ ಒದಗಿಸುವುದು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೫೧೩ (೬೪೫) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉತ್ತರ ಕರ್ನಾಟಕ ಪ್ರಸಿದ್ಧ ಯಾತ್ರಾ ಸ್ಥಳವಾದ ಶ್ರೀ ಯಲ್ಲಮ್ಮ ಗುಡ್ಡದಲ್ಲಿ ಮೂಲಭೂತ ಸೌಲಭ್ಯಗಳಾದ ಶೌಚಾಲಯಗಳ ನಿರ್ಮಾಣ, ಯಾತ್ರಿನಿವಾಸ ಹಾಗೂ ಕುಡಿಯುವ ನೀರು ಮುಂತಾದ ಸೌಲಭ್ಯಗಳನ್ನು ಕೈಗೊಂಡಿದ್ದು, ಅಲ್ಲಿ ಯಾತ್ರಿಕರ ಬೇಡಿಕೆಗೆ ಅನುಗುಣವಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಅದಕ್ಕೆ ಕೈಗೊಂಡ ಕ್ರಮಗಳೇನು ;

(ಆ) ಯಾತ್ರಾ ಸ್ಥಳದಲ್ಲಿ ನೈರ್ಮಲ್ಯ ಕಾಪಾಡಲು ಸಾರ್ವಜನಿಕರಿಗೆ ನಿರ್ಮಿಸಿದ ಶೌಚಾಲಯಗಳು ಎಷ್ಟು ; ಪ್ರವಾಸಿಗರಿಗೆ ಕುಡಿಯುವ ನೀರಿನ ಸೌಲಭ್ಯಕ್ಕೆ ಕೈಗೊಂಡ ಕ್ರಮಗಳೇನು ?

## ಹದಗೆಟ್ಟಿರುವ ಕಾನೂನು ಮತ್ತು ಸುವ್ಯವಸ್ಥೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೫೧೪ (೬೪೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟು ಸಾರ್ವಜನಿಕರಿಗೆ ಅದರಲ್ಲಿಯೂ ವಿಶೇಷವಾಗಿ ಹೆಣ್ಣು ಮಕ್ಕಳು ತೊಂದರೆ

ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಕಳೆದ ಒಂದು ವರ್ಷದಲ್ಲಿ ರಾಜ್ಯದಲ್ಲಿ ಮಹಿಳೆಯವರ ಮೇಲೆ ನಡೆದಿರುವ ದೌರ್ಜನ್ಯ ಪ್ರಕರಣಗಳು ಎಷ್ಟು ; ಇಂತಹ ಪ್ರಕರಣಗಳಲ್ಲಿ ಕಾನೂನು ಕ್ರಮ ಜರುಗಿಸಲಾಗಿದೆಯೇ ;

(ಆ) ರಾಜ್ಯದಲ್ಲಿರುವ ಒಟ್ಟು ಮಂಜೂರಾದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು ಕಾನ್ಸ್‌ಟೇಬಲ್ ಹುದ್ದೆಗಳು ಮತ್ತು ಖಾಲಿ ಹುದ್ದೆಗಳು ಎಷ್ಟು ; ಖಾಲಿ ಇರುವ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು ಕಾನ್ಸ್‌ಟೇಬಲ್ ಹುದ್ದೆಗಳ ಭರ್ತಿ ಮಾಡುವ ವಿಚಾರ ಸರ್ಕಾರದ ಮುಂದೆ ಇದೆಯೇ; ಎಷ್ಟು ಕಾಲಮಿತಿಯಲ್ಲಿ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ?

## ಆರ್.ಎಂ.ವಿ. ಬಡಾವಣೆಯ ಡಾಲರ್ಸ್ ಕಾಲೋನಿಯ ಚರಂಡಿ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-**

೫೧೫ (೬೫೨) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದ ಆರ್.ಎಂ.ವಿ. ಬಡಾವಣೆಯ ಡಾಲರ್ಸ್ ಕಾಲೋನಿಯ ಮಧ್ಯದಲ್ಲಿ ಹಾದು ಹೋಗುವ ಮಳೆ ನೀರಿನ ಚರಂಡಿಯ ಉದ್ದವೆಷ್ಟು ;

(ಆ) ಈ ಚರಂಡಿಯಲ್ಲಿ ಮಳೆ ನೀರಿಗೆ ಬದಲಾಗಿ ಕೊಳಚೆ ನೀರು ಹರಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ಸಮಸ್ಯೆಯಿಂದ ಈ ಭಾಗದ ಜನರ ಆರೋಗ್ಯದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಸರ್ಕಾರ ಗಮನಿಸಿದೆಯೇ ;

(ಈ) ಈ ಚರಂಡಿಗೆ ಮೇಲ್ಛಾವಣಿ ಹೊದಿಕೆ ನಿರ್ಮಾಣ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಪಶು ವೈದ್ಯರ ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-**

೫೧೬ (೬೫೪) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿನ ಪಶು ವೈದ್ಯರ ಹುದ್ದೆಗಳೆಷ್ಟು ; ಹಾಲಿ ಕೆಲಸ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ ಎಷ್ಟು ; ಮತ್ತು ಖಾಲಿ ಇರುವ ವೈದ್ಯರ ಸಂಖ್ಯೆ ಎಷ್ಟು ;

(ಆ) ಇಷ್ಟು ಪ್ರಮಾಣದಲ್ಲಿ ಹುದ್ದೆಗಳು ಖಾಲಿ ಇರಲು ಕಾರಣಗಳೇನು;

(ಇ) ಅವಶ್ಯಕತೆಗನುಗುಣವಾಗಿ ಪಶು ವೈದ್ಯಕೀಯ ವಿಶ್ವವಿದ್ಯಾಲಯಗಳಲ್ಲಿ ಪಶು ವೈದ್ಯಕೀಯ ವಿದ್ಯಾರ್ಥಿಗಳ ಪ್ರವೇಶ ಮಿತಿಯನ್ನು ಹೆಚ್ಚಿಸಲು ಇರುವ ತೊಂದರೆಗಳೇನು ?

## ಕಬ್ಬಿಣದ ಅದಿರಿನ ಪ್ರಮಾಣ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-**

೫೧೭ (೬೫೩) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಉತ್ಪಾದನೆ ಆಗುತ್ತಿರುವ ಕಬ್ಬಿಣದ ಅದಿರಿನ ಪ್ರಮಾಣ ಎಷ್ಟು ;

(ಆ) ಈ ಕಬ್ಬಿಣದ ಅದಿರನ್ನು ಯಾವ ಯಾವ ಕಂಪನಿ ಉತ್ಪಾದಿಸುತ್ತಿದೆ ;

(ಇ) ಕಬ್ಬಿಣದ ಅದಿರಿನ ಮೇಲೆ ಸರ್ಕಾರ ವಿಧಿಸಿರುವ ಶುಲ್ಕ/ಸುಂಕ ಎಷ್ಟು ;

(ಈ) ವಾರ್ಷಿಕವಾಗಿ ಕಬ್ಬಿಣದ ಅದಿರಿನ ಗಣಿಗಾರಿಕೆಯಿಂದ ಸರ್ಕಾರಕ್ಕೆ ಬರುವ ಆದಾಯವೆಷ್ಟು ?

## ಗುತ್ತಿಗೆ ಕಾರ್ಮಿಕರಿಗೆ ವೇತನ ಪಾವತಿ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೫೧೮ (೬೫೮) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಮಹಾನಗರ ಪಾಲಿಕೆಯ ಗುತ್ತಿಗೆ ನೌಕರರಿಗೆ ಸರಿಯಾಗಿ ಸಂಬಳ ವಿತರಣೆ ಆಗುತ್ತಿದೆಯೇ ; ಕಳೆದ ಜನವರಿ ತಿಂಗಳಿಂದ ಸಂಬಳ ವಿತರಣೆ ಮಾಡಿರುವ ಬಗ್ಗೆ ಸಂಪೂರ್ಣ ಅಂಕಿ-ಅಂಶಗಳ ವಿವರಣೆ ನೀಡುವುದು ;

(ಆ) ಈ ಗುತ್ತಿಗೆ ಕಾರ್ಮಿಕರಿಗೆ ಸರಿಯಾಗಿ ಸಂಬಳ ವಿತರಣೆ ಆಗದಿರುವುದರಿಂದ ಪಾಲಿಕೆ ಕೆಲಸ ಕಾರ್ಯಗಳಿಗೆ ಅಡ್ಡಿ ಉಂಟಾಗುತ್ತಿದ್ದು, ಗುತ್ತಿಗೆ ಕಾರ್ಮಿಕರಿಗೆ ಪ್ರತಿ ತಿಂಗಳ ವೇತನ ನೀಡಲು ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ ?

## ಉದ್ದೇಶಿತ ೨೪ X ೭ ಕುಡಿಯುವ ನೀರು ಯೋಜನೆ ಶೀಘ್ರ ಜಾರಿ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೫೧೯ (೬೫೫) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ನಗರದಲ್ಲಿ ಕುಡಿಯುವ ನೀರು ಸರಬರಾಜು ಮಾಡಲು ಉದ್ದೇಶಿತ ೨೪ X ೭ ಕುಡಿಯುವ ನೀರು ಸರಬರಾಜು ಯೋಜನೆಯ ಪ್ರಸಕ್ತ ವಾಸ್ತವಿಕ ಸ್ಥಿತಿಗತಿ ಏನು ;

(ಆ) ಈ ನಗರದಲ್ಲಿ ಕುಡಿಯುವ ನೀರು ವಾರಕ್ಕೆ ಒಮ್ಮೆ ಸರಬರಾಜು ಆಗುತ್ತಿದ್ದು, ಇದರಿಂದಾಗಿ ಸಾರ್ವಜನಿಕರು ತುಂಬಾ ತೊಂದರೆ

ಅನುಭವಿಸುತ್ತಿದ್ದು, ಉದ್ದೇಶಿತ ೨೪ X ೭ ಕುಡಿಯುವ ನೀರು ಯೋಜನೆ ವಿಳಂಬಕ್ಕೆ ಕಾರಣಗಳೇನು ;

(ಇ) ಈ ಉದ್ದೇಶಿತ ಕಾಮಗಾರಿ ಎಷ್ಟು ಶೀಘ್ರವಾಗಿ ಪೂರೈಸಿ ಯಾವ ಕಾಲಮಿತಿಯಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಅನುಕೂಲ ಮಾಡಿಕೊಡಲಾಗುವುದು ?

## ಬೀದಿ ನಾಯಿಗಳ ತೀವ್ರ ಕಾಟ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೫೨೦ (೬೫೭) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಳ್ಳಾರಿ ನಗರದಲ್ಲಿ ಬೀದಿ ನಾಯಿಗಳ ತೀವ್ರ ಕಾಟದಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿದ್ದು, ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ ;

(ಆ) ಈ ನಗರದಲ್ಲಿ ಕೆಲವು ದಿನಗಳ ಹಿಂದೆ ಆರು ವರ್ಷದ ಚಿಕ್ಕ ಮಗು ಬೀದಿ ನಾಯಿಗಳ ಕಡಿತದಿಂದ ಸಾವನ್ನಪ್ಪಿರುತ್ತದೆ. ಈ ಪ್ರಕರಣದಲ್ಲಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ (ಆ ಮಗುವಿನ ವಿಳಾಸ ನೀಡುವುದು) ;

(ಇ) ಬೀದಿ ನಾಯಿಗಳ ತೀವ್ರ ಕಾಟದಿಂದ ರಾತ್ರಿ ವೇಳೆ ವಾಹನ ಸವಾರರಿಗೆ ಭಯದ ವಾತಾವರಣ ನಿರ್ಮಾಣವಾಗಿದ್ದು, ಇದನ್ನು ನೀಗಿಸಲು ಶೀಘ್ರವಾಗಿ ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ (ವಿವರ ನೀಡುವುದು) ;

(ಈ) ಈ ಬೀದಿ ನಾಯಿಗಳ ಕಾಟ ತಪ್ಪಿಸಲು ಏನಾದರೂ ವಿಶೇಷ ತಂಡ ರಚನೆ ಮಾಡಲಾಗಿದೆಯೇ ; ಈವರೆಗೆ ಈ ತಂಡದ ಕಾರ್ಯಾಚರಣೆಗಳೇನು ?

## ರಸ್ತೆ ಡಾಂಬರೀಕರಣ ಮತ್ತು ಒಳಚರಂಡಿ ವ್ಯವಸ್ಥೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) :-**

೫೨೧ (೫೮೦) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಿ.ಬಿ.ಎಂ.ಪಿ. ವ್ಯಾಪ್ತಿಗೊಳಪಡುವ ಮಾರುತಿ ಬಡಾವಣೆ, ಬಸಾಪುರ ಗ್ರಾಮ ಹೊಸೂರು ರಸ್ತೆ, ಇಲ್ಲಿನ ರಸ್ತೆಯು ಡಾಂಬರೀಕರಣವಿಲ್ಲದೆ ಹದಗೆಟ್ಟಿರುವುದು ಹಾಗೂ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ಮಳೆ ಬಂದಾಗ ಸಾರ್ವಜನಿಕರು ಸಂಚರಿಸಲು ಅನಾನುಕೂಲವಾಗಿರುವುದು ಹಾಗೂ ಸೊಳ್ಳೆಗಳ ಕಾಟದಿಂದ ಅನಾರೋಗ್ಯಕ್ಕೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ರಸ್ತೆಯನ್ನು ದುರಸ್ತಿಗೊಳಿಸಿ, ಡಾಂಬರೀಕರಣ ಗೊಳಿಸಿ ಹಾಗೂ ಒಳಚರಂಡಿ ವ್ಯವಸ್ಥೆ ಮಾಡಿ ಸಾರ್ವಜನಿಕರ ಆರೋಗ್ಯ ಕಾಪಾಡಲು ಹಾಗೂ ಸಂಚಾರಕ್ಕೆ ಅನುವು ಮಾಡಿಕೊಡಲು ಇರುವ ತೊಂದರೆಗಳೇನು ;

(ಇ) ತೊಂದರೆಗಳಿಲ್ಲದಿದ್ದರೆ, ಇನ್ನೆಷ್ಟು ದಿನಗಳಲ್ಲಿ ಬಡಾವಣೆಯ ರಸ್ತೆಗಳನ್ನು ಡಾಂಬರೀಕರಣ ಹಾಗೂ ಒಳಚರಂಡಿ ವ್ಯವಸ್ಥೆ ಕಲ್ಪಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುವುದು ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59/ಕಾ.ಸೂ. 0 3362/1000 ಪ್ರತಿಗಳು/01-07-2014